ಇನ್ನು ಶ್ರೀ ಎ. ಎಸ್ ಕೃಷ್ಣಮೂರ್ತಿ ಎನ್ನುವವರನ್ನು ಈ ಬೋರ್ಡಿನಲ್ಲಿ ಫೈನಾನ್ಸ್ ಮೆಂಬರಾಗಿ ಮಾಡಿದ್ದಾರೆ ಮತ್ತು ಇವರೇ ಸ್ಟೇಟ್ ಕಂಟ್ರೋಲರ್ ಆಫ್ ಅಕೌಂಟ್ಸ್ ಎನ್ನುವ ಅಧಿಕಾರಿಗಳಾಗಿ ಅಕೌಂಟೆಂಟ್ ಜನರಲ್‌ರವರ ಸಮಾನವಾದ ಅಧಿಕಾರಿಗಳಾಗಿದ್ದಾರೆ. ಫೈನಾನ್ಸ್ ಮೆಂಬರಾಗಿರುವುದರ ಜೊತೆಗೆ ಇವರೇ ಏಕೆ ಕಂಟ್ರೋಲರ್ ಆಫ್ ಅಕೌಂಟ್ಸ್ ಆಗಿಯೂ ಇರಬೇಕೆಂದು ಕೇಳುತ್ತೇನೆ. ಇವರು ನಮ್ಮ ದೇಶದವರೂ ಅಲ್ಲ. ತಮಿಳುನಾಡಿನಿಂದ ಇಲ್ಲಿಗೆ ಬಂದ ಅಧಿಕಾರಿಗಳು. ಇವರಿಗೆ ಆಗುತ್ತಿರುವ ಖರ್ಚುಗಳನ್ನು ನೋಡಿದರೆ, ಇವರ ಟೆಲಿಫೋನು ಚಾರ್ಜಿಗೆ ಸುಮಾರು ೨,೦೦೦ ದಷ್ಟು ಆಗುತ್ತಿದೆ. ಟಿ. ಎ. ಗಾಗಿ ಸುಮಾರು ೨೦೦೦ ರೂಪಾಯಿಗಳು ಮತ್ತು ಹೌಸ್ ಅಲೋಯನ್ಸ್‌ಗಾಗಿ ೬೦೦ ಹೀಗೆ ಒಟ್ಟು ಒಂದು ತಿಂಗಳಿಗೆ ಸುಮಾರು ಹತ್ತು ಸಾವಿರದವರೆಗೆ ಬರುತ್ತಿದೆ.

ಇವರು ಬಹಳ ಬುದ್ಧಿವಂತರಾದ ಮತ್ತು ಚತುರರಾದ ಅಧಿಕಾರಿಗಳಾಗಿರಬೇಕು ಎಂದು ಇಷ್ಟು ಹೆಚ್ಚು ಸಂಬಳ ಕೊಟ್ಟು ಇವರನ್ನು ಇಲ್ಲಿ ಇಟ್ಟುಕೊಂಡಿದ್ದಾರೆ. ಇವರು ನಮ್ಮ ದೇಶದವರಲ್ಲ. ತಮಿಳುನಾಡಿನಿಂದ ಬಂದಿರುವ ಈ ಆಫೀಸರ್‌ಗಾಗಿ ತಿಂಗಳಿಗೆ ಸುಮಾರು ಹತ್ತು ಸಾವಿರ ರೂಪಾಯಿಗಳಷ್ಟು ಹೆಚ್ಚಿನ ಮೊತ್ತದ ಹಣ ಕೊಟ್ಟು ಇಲ್ಲಿ ಇಡಬೇಕಾದ ಅಗತ್ಯವೇನಿದೆ ಎಂದು ನಾನು ರಾಜ್ಯದ ಸಚಿವರನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಇವರಿಗಾಗಿ ತಿಂಗಳಿಗೆ ಸುಮಾರು ಪತ್ತು ಸಾವಿರ ರೂಪಾಯಿಗಳು ಖರ್ಚಾಗುತ್ತಿರುವುದರಿಂದ, ಇವರನ್ನು ಮೊದಲು ಆ ಕೆಲಸದಿಂದ ತೆಗೆದುಹಾಕಬೇಕಲ್ಲದೆ, ಅದಷ್ಟು ಕಡಿಮೆ ಖರ್ಚಿನಲ್ಲಿ, ಈ ಬೋರ್ಡಿನ ಹಿತಚಿಂತನೆ ಮಾಡತಕ್ಕಂಥ ವ್ಯಕ್ತಿಯನ್ನು ಆ ಜಾಗಕ್ಕೆ ನೇಮಕಮಾಡುವುದರ ಕಡೆಗೆ ತುರ್ತು ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಈ ಇಲಾಖೆಯಲ್ಲಿ ಅಭ್ಯರ್ಥಿಗಳ ಆಯ್ಕೆಯನ್ನು ಯಾವ ರೀತಿ ಮಾಡುತ್ತಿದ್ದಾರೆಂಬ ಬಗ್ಗೆ ಕೆಲವು ವಿಷಯಗಳನ್ನು ಹೇಳುತ್ತೇನೆ. ೬೦ ಫಸ್ಟ್ ಡಿವಿಜನ್ ಕ್ಲರ್ಕ್ಸ್ ಪೋಸ್ಟ್‌ಗೆ ಈ ಬೋರ್ಡಿನವರು ಅರ್ಜಿಗಳನ್ನು ಕಾಲ್ ಫಾರ್ ಮಾಡಿದಾಗ ಸುಮಾರು ೩ ಸಾವಿರ ಅರ್ಜಿಗಳು ಬಂದವು. ಇಷ್ಟೊಂದು ಜನ ಅರ್ಜಿ ಹಾಕಿಕೊಂಡಿರುವಾಗ, ೬೦ ಪೋಸ್ಟ್‌ಗಳ ಪೈಕಿ ಸುಮಾರು ೪೦-೫೦ ಜನರನ್ನು ಆ ಬೋರ್ಡಿನಲ್ಲಿ ಕೆಲಸಮಾಡುತ್ತಿರುವ ಅಧಿಕಾರಿಗಳ ಸಂಬಂಧೀಕರನ್ನೇ ನೇಮಕಮಾಡಿಕೊಂಡಿದ್ದಾರೆ. ಮತ್ತು ಇದೇ ಬೋರ್ಡಿನಲ್ಲಿ ಕೆಲಸಮಾಡುತ್ತಿರುವ ಶ್ರೀ ಎಚ್. ಎಸ್. ರಾಮಸ್ವಾಮಿ, ಕಂಟ್ರೋಲರ್ ಆಫ್ ಅಕೌಂಟ್ಸ್, ಇವರ ಇಬ್ಬರು ಹೆಣ್ಣುಮಕ್ಕಳನ್ನು ಸೆಲೆಕ್ಟ್ ಮಾಡಿದ್ದಾರೆ. ಈ ರೀತಿ ಸ್ವಾರ್ಥ ಮನೋಭಾವ ಇಟ್ಟುಕೊಂಡು ಆ ಕಮಿಟಿಯಲ್ಲಿರತಕ್ಕಂಥ ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರು ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರು ಸೆಲೆಕ್ಟ್ ಮಾಡಿದರೆ ಉಳಿದ ಸಾವಿರಾರು ಜನ ಅಭ್ಯರ್ಥಿಗಳ ಗತಿ ಏನಾಗಬೇಕು? ಅವರ ಬಗ್ಗೆ ಏನಾದರೂ ಯೋಚನೆ ಮಾಡಿದ್ದಾರೆಯೇ ಎಂದು ಕೇಳಬೇಕಾಗುತ್ತದೆ. ಇದೇ ರೀತಿ ಎಲ್ಲ ಬೋರ್ಡ್‌ಗಳಲ್ಲಿಯೂ ಮತ್ತು ಕಾರ್ಪೊರೇಷನ್‌ಗಳಲ್ಲಿಯೂ ನಡೆಯುತ್ತಿದೆ. ಸರ್ಕಾರದವರು ಇದರ ಕಡೆಗೆ ಏತಕ್ಕೆ ಗಮನಕೊಟ್ಟಿಲ್ಲ ಎಂದು ಕೇಳುತ್ತೇನೆ. ಸೆಕೆಂಡ್ ಡಿವಿಜನ್ ಕ್ಲರ್ಕ್‌ಗಳನ್ನು ನೇಮಕ ಮಾಡುವಾಗಲೂ ಸಹ ಇದೇ ದುರ್ವ್ಯವಹಾರ ನಡೆದಿದೆ.

ಈ ಬೋರ್ಡಿನವರು ಲೇಬರ್‌ಗೆ ಸಂಬಂಧಪಟ್ಟ ಕಾನೂನಿನಲ್ಲಿ ಪರಿಣತಿ ಪಡೆಯಲು ಇಂಗ್ಲೆಂಡ್‌ಗೆ ಶ್ರೀ ಎ. ವಿ ರಾಜು, ಶ್ರೀ ನಂದಾರಾಮು ಎಂಬ ಇಬ್ಬರನ್ನು ಕಳಿಸಿದರು.

Deputy Speaker.—They were sent to study the labour laws to make them applicable to our laws.

Sri M. S. Krishnan.—They were also sent to other Socialist countries.

ಶ್ರೀ ಎಸ್. ಬಂಗಾರಪ್ಪ.—ಇವರಿಬ್ಬರನ್ನು ಹ್ಯೂಜ್ ಕಾಸ್ಟ್‌ನಲ್ಲಿ ಇಂಗ್ಲೆಂಡ್‌ಗೆ ಟ್ರೈನಿಂಗ್‌ಗಾಗಿ ಏತಕ್ಕಾಗಿ ಕಳಿಸಿಕೊಟ್ಟರು ಎಂಬ ಸಂಗತಿ ಆಶ್ಚರ್ಯವಾಗಿದೆ. ಇದಕ್ಕಾಗಿ ಎಷ್ಟು ಖರ್ಚಾಯಿತು ಎಂಬ ವಿವರಗಳು ನನಗೆ ಸಿಕ್ಕಲಿಲ್ಲ. ಅವರು ಲೇಬರ್ ಲಾಸ್‌ನಲ್ಲಿ ಟ್ರೈನಿಂಗ್ ಪಡೆದು ವಾಪಸ್ ಬಂದಮೇಲೆ ಅವರನ್ನು ಗೆಜಿಟೆಡ್ ಆಫೀಸರ್ ಆಗಿ ಅದೂ ರೂಲ್ಸ್‌ಗೆ ವಿರುದ್ಧವಾಗಿ ನೇಮಕಮಾಡಿದರು. ಅವರು ಯಾವ ಮಂತ್ರಿಗಳದ್ದೋ ಕೈ ಹಿಡಿದು ಕಾಲು ಹಿಡಿದು, ತಲೆ ಹಿಡಿದ ಕಾರಣ ಅವರಿಗೆ ಕಾನೂನು ಬಿಟ್ಟು ಪ್ರಮೋಷನ್ ಕೊಡಲಾಯಿತು. ಇಂಗ್ಲೆಂಡ್‌ನಲ್ಲಿರತಕ್ಕಂಥ ಕಾನೂನು ನಮ್ಮ ರಾಜ್ಯಕ್ಕೆ ಲಗಾವ್ ಆಗುವುದಿಲ್ಲ ಎಂದು ನಾನು ತಿಳಿದಿದ್ದೇನೆ. ಆದರೂ ಅವರಿಬ್ಬರನ್ನೂ ಅಲ್ಲಿಗೆ ಟ್ರೈನಿಂಗ್‌ಗೆ ಕಳಿಸಿ ಕೊಟ್ಟಿದ್ದರು.

ಶ್ರೀ ಎಸ್. ಎಂ. ಶೀರ್‌ನಾಳಿ ಚಂದ್ರಶೇಖರ್.—ಮಂತ್ರಿಗಳ ತಲೆ ಹಿಡಿಯಲಾಯಿತು ಎಂದು ಮಾನ್ಯ ಸದಸ್ಯರು ಹೇಳಿದರು ; ಎಕ್ಸ್‌ಪ್ಲೈನ್ ಮಾಡಬೇಕು ;

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸದಸ್ಯರು ಜುಟ್ಟಿನ ವಿಚಾರ ಮಾತನಾಡಿರುವುದರಿಂದ, ಅವರಿಗೆ ಆ ವಿಷಯ ಗೊತ್ತಿರಬಹುದು ;

ಶ್ರೀ ಎಸ್. ಬಂಗಾರಪ್ಪ.—ನನ್ನ ಪ್ರಕಾರ ಹೇಳಬೇಕೆಂದರೆ ;

ಉಪಾಧ್ಯಕ್ಷರು.—ನನಗೆ ಗೊತ್ತಾಯಿತು.

ಶ್ರೀ ಎಸ್. ಬಂಗಾರಪ್ಪ.—ಮಂತ್ರಿಗಳ ತಲೆಯಲ್ಲಿರುವುದನ್ನು ಅವರು ಪಡೆದುಕೊಂಡು ಹೋಗುವುದು. ಇದರಿಂದ ಮುಂದೆ ಮಂತ್ರಿಗಳ ತಲೆಯಲ್ಲಿ ಏನೂ ಉಳಿಯುವುದಿಲ್ಲ.

MR. DEPUTY SPEAKER.—This interpretation is too much.

SRI H. M. CHANNABASAPPA.—The Hon. Member has made a research that this brain contains nothing.

ಶ್ರೀ ಎಸ್. ಬಂಗಾರಪ್ಪ.—ನಾನು ಈ ವಿಷಯವನ್ನು ಹೇಳಿದ್ದರ ಅರ್ಥ ಏನೆಂದರೆ, ಈ ಬೋರ್ಡಿನಲ್ಲಿರತಕ್ಕ ಅಧಿಕಾರಿಗಳು ತಮ್ಮ ಅಧಿಕಾರವನ್ನು ದುರುಪಯೋಗಮಾಡಿಕೊಳ್ಳುತ್ತಿದ್ದಾರೆ ಎನ್ನುವುದರ ಬಗ್ಗೆ ಮಾತ್ರ. ಮುಖ್ಯವಾಗಿ ಅಧಿಕಾರಿಗಳ ಮೇಲಿನ ಹತೋಟಿಯನ್ನು ಮಂಡಲಿಯ ಅಧ್ಯಕ್ಷರು ಮತ್ತು ಸದಸ್ಯರು ಹೊಂದಿಲ್ಲ. ಅದಕ್ಕಾಗಿ ನಾನು ಆ ಬೋರ್ಡಿನ ಸದಸ್ಯರ ಮತ್ತು ಅಧ್ಯಕ್ಷರ ಮೇಲೆ ಆಪಾದನೆ ಮಾಡುತ್ತಿದ್ದೇನೆ. ಮತ್ತೊಂದು ಮುಖ್ಯ ಸಂಗತಿ ಎಂದರೆ ಇಲ್ಲಿ ಬೇಲಿಯೇ ಹೊಲ ಮೇಯುತ್ತಿರುವುದರಿಂದ ಇನ್ನು ಬೋರ್ಡ್ ಆದರೂ ಎಲ್ಲಿ ಉಳಿಯುತ್ತದೆ. ಈಗ ಬೇರೆ ರಾಜ್ಯಗಳಿಗೆ ನಮ್ಮ ರಾಜ್ಯದವರು ವಿದ್ಯುಚ್ಛಕ್ತಿಯನ್ನು ಬಹಳ ಕಡಿಮೆ ದರದಲ್ಲಿ ಮಾರಾಟಮಾಡುತ್ತಿದ್ದಾರೆ. ಇದನ್ನು ಜಾಸ್ತಿ ಮಾಡುವ ಕಡೆಗೆ ಸರ್ಕಾರದವರು ಗಮನ ಕೊಡಬೇಕು ಮತ್ತು ಈಗ ಏನು ಈ ಮಂಡಲಿಯಲ್ಲಿ ನಾನಾ ರೀತಿಯಿಂದ ಹಣ ಸೋರಿ ಹೋಗುತ್ತಿದೆ ಅದೆಲ್ಲವನ್ನೂ ಕಂಟ್ರೋಲ್ ಮಾಡಿದ್ದೇ ಆದರೆ ಮತ್ತು ಅದರ ಕಡೆಗೆ ಹೆಚ್ಚು ಗಮನ ಕೊಟ್ಟಿದ್ದೇ ಆದರೆ ಇನ್ನೂ ೯, ೧೦ ಅಥವಾ ೧೫ ಕೋಟಿ ರೂಪಾಯಿಗಳ ನಿವ್ವಳ ಆದಾಯವನ್ನು ಗಳಿಸಬಹುದು. ಈ ಮೊದಲೇ ಮುನ್ನೆಚ್ಚರಿಕೆ ವಹಿಸಿದ್ದರೆ ಈ ಸಾಲಿನಲ್ಲಿಯೇ ಇಷ್ಟೊಂದು ಆದಾಯವನ್ನು ಗಳಿಸಬಹುದಾಗಿತ್ತು.

ಈಗ ಈ ಬೋರ್ಡಿನವರು ಲೀಗಲ್ ಅಡ್ವೈಸರನ್ನು ನೇಮಕಮಾಡಿಕೊಂಡಿದ್ದಾರೆ. ಮೊದಲು ಮಂಡಲಿಯವರು ಒಂದು ರಿಟ್ ಅರ್ಜಿಯನ್ನು ಹೈಕೋರ್ಟಿನಲ್ಲಿ ದಾಖಲುಮಾಡಿದರೆ ಲೀಗಲ್ ಅಡ್ವೈಸರ್‌ಗೆ ೫೦ ರೂಪಾಯಿ ಕೊಡುತ್ತಿದ್ದರು ಅದನ್ನು ಈಗ ಒಂದೇ ಸಲ ಒಂದು ಸಾವಿರ ರೂಪಾಯಿಗಳಿಗೆ ಹೆಚ್ಚಿಸಿದ್ದಾರೆ ಒಂದು ರಿಟ್ ಪಿಟಿಷನ್‌ಗೆ ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಈ ರೀತಿಯ ಅಗ್ರಿಮೆಂಟ್‌ನ್ನು ಈ ಬೋರ್ಡಿನವರು ಏತಕ್ಕೆ ಮಾಡಿಕೊಂಡಿದ್ದಾರೋ ನನಗೆ ತಿಳಿಯುತ್ತಿಲ್ಲ. ಮಂಗಳೂರಿನಲ್ಲಿ ವಿದ್ಯುಚ್ಛಕ್ತಿ ಮಂಡಲಿಗೆ ಸಂಬಂಧಪಟ್ಟಂತೆ ಒಂದು ಲೇಬರ್ ಡಿಸ್‌ಪ್ಯೂಟ್‌ನಲ್ಲಿ ಭಾಗವಹಿಸಲು ಈ ಲೀಗಲ್ ಅಡ್ವೈಸರ್ ಬೆಂಗಳೂರಿನಿಂದ ಅನೇಕ ಸಲ ಮಂಗಳೂರಿಗೆ ಪ್ಲೇನ್‌ನಲ್ಲಿ ಹೋಗಿ ಬಂದಿದ್ದಾರೆ. ನಾವು ಸಭೆ ನಡೆಯುತ್ತಿರುವಾಗ ಮಂತ್ರಿಗಳು ದೆಹಲಿಗೆ ಹೋಗುವುದಕ್ಕೆ ಬಿಡುವುದಿಲ್ಲ, ಆದರೆ ಈ ಲೀಗಲ್ ಅಡ್ವೈಸರ್ ಮಂಗಳೂರಿಗೆ ಅನೇಕ ಸಲ ವಿಮಾನದಲ್ಲಿ ಹೋಗಿ ಬಂದಿದ್ದಾರೆ. ಅದಕ್ಕಾಗಿ ಮಂಡಲಿಯವರು ೧೨ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ಈ ಲೀಗಲ್ ಅಡ್ವೈಸರ್ ಬಸ್, ಕಾರು ಮತ್ತು ರೈಲ್‌ನಲ್ಲಿ ಪ್ರಯಾಣ ಮಾಡುವುದಿಲ್ಲವೆಂದು ಕಾಣುತ್ತದೆ, ಅದಕ್ಕಾಗಿ ವಿಮಾನದಲ್ಲಿ ಪ್ರಯಾಣಮಾಡಿದ್ದಾರೆ ಈಗ ಮೈಸೂರು ಸರ್ಕಾರದವರು ಬೋರ್ಡಿಗೆ ಎಲ್.ಐ.ಸಿ.ಯಿಂದ ಸುಮಾರು ೧೨ ಕೋಟಿ ರೂಪಾಯಿಗಳನ್ನು ಸಾಲ ಕೊಡಿಸಿರುವುದರಿಂದ ಆ ಹಣವನ್ನು ಈ ರೀತಿ ದುಂದು ವೆಚ್ಚ ಮಾಡುತ್ತಿದ್ದಾರೆ. ಮಂಗಳೂರಿನಲ್ಲಿರುವ ಕೇಸನ್ನು ನೋಡಿಕೊಳ್ಳಲು ಮಂಗಳೂರಿನಲ್ಲಿರುವ ಲಾಯರ್‌ಗೆ ಒಪ್ಪಿಸಿದ್ದರೆ ಅದರ ಖರ್ಚು ೨೦೦ ಅಥವಾ ೫೦೦ ರೂಪಾಯಿಗಳಲ್ಲಿ ಮುಗಿಯುತ್ತಿತ್ತು. ಆದರೆ ಈ ಬೋರ್ಡಿನವರು ಬೆಂಗಳೂರಿನಿಂದಲೇ ವಿಮಾನದಲ್ಲಿ ತಮ್ಮ ಲೀಗಲ್ ಅಡ್ವೈಸರನ್ನು ಕಳಿಸಿಕೊಟ್ಟು ೧೨ ಸಾವಿರ ರೂಪಾಯಿಗಳವರೆಗೆ ಖರ್ಚು ಮಾಡಿದ್ದಾರೆ. ನಾನು ಹೇಳಿದ ರೀತಿಯಲ್ಲಿ ಮಾಡಿದ್ದರೆ ಹನ್ನೊಂದೂವರೆ ಸಾವಿರ ರೂಪಾಯಿಗಳನ್ನು ಉಳಿಸಬಹುದಾಗಿತ್ತು. ಈ ಹಣದಿಂದ ವೈರ್, ಪೋಲ್ಸ್ ಮುಂತಾದವನ್ನು ಖರೀದಿ ಮಾಡಿ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿ ಒದಗಿಸಬಹುದಾಗಿತ್ತು. ಆದರೆ ಅವರು ಈ ರೀತಿ ಯೋಚನೆಮಾಡದೆ ತಮಗಿಷ್ಟಬಂದಂತೆ ಹಣ ಖರ್ಚು ಮಾಡುತ್ತಿದ್ದಾರೆ.

ಎಂ.ಎಸ್.ಇ.ಬಿ. ಯವರು ಆ ಲೀಗಲ್ ಅಡ್ವೈಸರಿಗೆ ಒಂದು ತಿಂಗಳಿಗೆ ಸರಾಸರಿ ೫ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಯಾವ ಶರತ್ತೂ ಇಲ್ಲದೆ ೫ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದು ತುಂಬಾ ಅನ್ಯಾಯ. ಇದಕ್ಕೆ ಸರ್ಕಾರದವರು ಏತಕ್ಕೆ ಗಮನಕೊಟ್ಟಿಲ್ಲ ಎಂದು ನಾನು ಕೇಳುತ್ತೇನೆ.

4-00 P. M.

ಆಡಿಟ್ ರಿಪೋರ್ಟ್ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಫೈನಾಷಿಯಲ್ ಸ್ಟೇಟ್‌ಮೆಂಟ್ ಅನ್ನು ನಾನು ನೋಡಿದ್ದೇನೆ. ಆಡಿಟ್ ರಿಪೋರ್ಟನ್ನು ನಾನು ನೋಡಿದ್ದೇನೆ. ಆಡಿಟ್ ರಿಪೋರ್ಟನಲ್ಲಿ ಈ ರೀತಿ ಕೊಟ್ಟರೆ ನಮಗೆ ಅರ್ಥವಾಗುವುದಿಲ್ಲ. ಮೈಸೂರ್ ಸ್ಟೇಟ್ ಎಲೆಕ್ಟ್ರಿಸಿಟಿ ಬೋರ್ಡಿನ ವ್ಯವಹಾರದ ಆಡಿಟ್ ರಿಪೋರ್ಟನ್ನು ಸದಸ್ಯರಿಗೆ ಏತಕ್ಕೆ ಒದಗಿಸಿಲ್ಲ ? ಆಡಿಟ್ ಸರ್ಟಿಫಿಕೇಟನ್ನು ಮಾತ್ರ ನಮಗೆ ಒದಗಿಸಿದ್ದಾರೆ. ಇದರಲ್ಲಿ ಎಲೆಕ್ಟ್ರಿಸಿಟಿ ಬೋರ್ಡಿನವರು ಮಾಡಿಕೊಂಡಿರತಕ್ಕ ವ್ಯವಹಾರಗಳನ್ನು ಪತ್ತೆ ಹಚ್ಚುವುದಕ್ಕೆ ನಮಗೆ ಸಾಧ್ಯವಾಗುತ್ತಿಲ್ಲ ಸಂಪೂರ್ಣವಾದ ತನಿಖೆ ಇರತಕ್ಕ ಆಡಿಟ್ ರಿಪೋರ್ಟನ್ನು ಏತಕ್ಕೆ ಈ ಸಭೆಯ ಮುಂದೆ ಇಡಲಿಲ್ಲ ಎಂದು ನಾನು ಕೇಳುತ್ತೇನೆ. ಇವರು ಎಂ.ಎಸ್.ಇ.ಬಿ.ಯ ಬ್ಯಾಲೆನ್ಸ್ ಷೀಟನ್ನು ವರ್ಲ್ಡ್ ಬ್ಯಾಂಕಿನವರಿಗೆ ಕೊಡುವುದಕ್ಕೆ ಒಂದು ಬ್ಯಾಲೆನ್ಸ್‌ಷೀಟ್ ಈ ಸಭೆಯ ಮುಂದೆ ಇಡುವುದಕ್ಕೆ ಒಂದು ಬ್ಯಾಲೆನ್ಸ್‌ಷೀಟು ಹೀಗೆ ಒಬ್ಬೊಬ್ಬರಿಗೆ ಒಂದೊಂದು ಬ್ಯಾಲೆನ್ಸ್‌ಷೀಟನ್ನು ತಯಾರು ಮಾಡಿದ್ದಾರೆ. ಇದು ಸರಿಯಲ್ಲ.

ಇನ್ನು ಎಂ ಎಸ್.ಇ.ಬಿ. ಯವರು ಟ್ರಾನ್ಸ್‌ಫಾರ್ಮರ್ ಕೊಂಡುಕೊಳ್ಳುವ ಬಗ್ಗೆ ಒಂದು ಮಾತು ಹೇಳುತ್ತೇನೆ. ಈಗ ಎನ್.ಜಿ.ಇ.ಎಫ್. ನಲ್ಲಿ ಟ್ರಾನ್ಸ್‌ಫಾರ್ಮರ್ ತಯಾರು ಮಾಡುತ್ತಿದ್ದಾರೆ. ಅಲ್ಲಿಂದ ಎಂ.ಎಸ್.ಇ.ಬಿ ಯವರು ಏತಕ್ಕೆ ಟ್ರಾನ್ಸ್‌ಫಾರ್ಮರ್ ಅನ್ನು ಕೊಂಡುಕೊಳ್ಳುತ್ತಿಲ್ಲ. ಇವರು ಬೇರೆ ರಾಜ್ಯದಲ್ಲಿ ಟ್ರಾನ್ಸ್‌ಫಾರ್ಮರನ್ನು ಖರೀದಿ ಮಾಡುವುದಕ್ಕೆ ಏತಕ್ಕೆ ಕೈ ಹಾಕಿದ್ದಾರೆ ? ಹೊರಗಡೆ ಏತಕ್ಕೆ ಕೊಂಡುಕೊಳ್ಳುತ್ತಾರೆ ಎಂದು ನಾನು ಪ್ರಶ್ನೆ ಮಾಡುತ್ತೇನೆ.

ಸ್ವಾಮಿ, ಮಾನ್ಯ ಮಂತ್ರಿಗಳಾದ ಶ್ರೀ ಚನ್ನಬಸಪ್ಪನವರನ್ನು ನಾನು ನೇರವಾಗಿ ಒಂದು ಮಾತನ್ನು ಕೇಳುತ್ತೇನೆ. ಅದು ಏನೆಂದರೆ ಕಾಳಿ ನದಿಯ ವಿಷಯ. ಮಾನ್ಯ ಹಣಕಾಸಿನ ಸಚಿವರು ಆಯವ್ಯಯ ಪಟ್ಟಿಯನ್ನು ಈ ಸಭೆಯ ಮುಂದೆ ಮಂಡಿಸಿದಾಗ ಕಾಳಿ ನದಿಯ ವಿಚಾರದಲ್ಲಿ ಒಂದು ಮಾತನ್ನು ಹೇಳಿದ್ದರು. ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಧನಸಹಾಯದಿಂದ ನಾವು ಈ ಕಾಳಿ ನದಿಯ ಪ್ರಾಜೆಕ್ಟನ್ನು ಕಾರ್ಯಗತಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. ಕೇಂದ್ರ ಸರ್ಕಾರದವರು ಇಷ್ಟೊಂದು ಹಣವನ್ನು ನಮಗೆ ಏಕದಂ ಕೊಡುವುದು ಅಪರೂಪವಾಗಿದೆ ಆದ್ದರಿಂದ ಈ ಬಗ್ಗೆ ತಾವು ಒಂದು ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕು ಈ ವಿಷಯ ನಮ್ಮ ದೇಶಕ್ಕೆಲ್ಲಾ ಗೊತ್ತಾಗಬೇಕು. ಈ ಕಾಳಿ ನದಿ ಯೋಜನೆಗೆ ಇಷ್ಟೊಂದು ದೊಡ್ಡ ಪ್ರಮಾಣದ ಹಣವನ್ನು ಯಾವ ಷರತ್ತೂ ಇಲ್ಲದೆ ಕೊಟ್ಟಿದ್ದಾರೆಯೇ ಹೇಗೆ ಎಂಬುದನ್ನು ತಿಳಿಸಬೇಕು, ಒಂದು ವೇಳೆ ಷರತ್ತುಗಳನ್ನು ಹಾಕಿದ್ದರೆ ಎಷ್ಟರ ಮಟ್ಟಿನ ಷರತ್ತನ್ನು ಹಾಕಿದ್ದಾರೆ ಎನ್ನುವ ವಿವರಣೆಯನ್ನು ಈ ಸದನದ ಮುಂದೆ ಇಡಬೇಕು ಎಂದು ನಾನು ಕೇಳುತ್ತೇನೆ.

ರೂರಲ್ ಎಲೆಕ್ಟ್ರಿಫಿಕೇಷನ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಮೈಸೂರು ರಾಜ್ಯದಲ್ಲಿ ೨೯ ಸಾವಿರ ಹಳ್ಳಿಗಳಿವೆ. ೧೯೭೧ನೇ ಇಸವಿ ಮಾರ್ಚ್ ತಿಂಗಳವರೆಗೆ ೧೨೬೩೩ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದಾರೆ ಎಂದು ಹೇಳಿದ್ದಾರೆ. ಇನ್ನೂ ೧೬ ಸಾವಿರ ಚಿಲ್ಲರೆ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಎಂ.ಎಸ್.ಇ ಬಿ. ಯವರಿಗೆ ಎಷ್ಟು ದುಡ್ಡು ಬೇಕಾಗುತ್ತದೆ, ಮತ್ತು ಎಷ್ಟು ವರ್ಷ ಬೇಕಾಗುತ್ತದೆ ? ಇದು ನಮಗಂತೂ ಅನುಮಾನವಾಗಿದೆ. ಈಗ ಇವರು ತಯಾರು ಮಾಡಿರತಕ್ಕ ಬ್ಯಾಲೆನ್ಸ್‌ಷೀಟ್‌ನಲ್ಲಿ ಕೊರತೆಯನ್ನು ತೋರಿಸುತ್ತಿದ್ದಾರೆ. ಆದ್ದರಿಂದ ನಮ್ಮ ಹಳ್ಳಿಗಳಿಗೆಲ್ಲಾ ಇವರು ವಿದ್ಯುಚ್ಛಕ್ತಿಯನ್ನು ಒದಗಿಸಬೇಕಾದರೆ ಇನ್ನೂ ಹಲವಾರು ವರ್ಷ ಬೇಕಾಗುತ್ತದೆ ಎಂದು ನಾನು ಹೇಳುತ್ತೇನೆ.

ಹೊಸ ಮೀಟರುಗಳ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ, ನಮ್ಮ ಶಿವಮೊಗ್ಗದಲ್ಲಿ ದೀಪವನ್ನು ಹಾಕದಿದ್ದರೂ ಮೀಟರುಗಳು ತಿರುಗುತ್ತಿದ್ದುವು. ಈ ರೀತಿ ಮೀಟರುಗಳು ತಿರುಗಿದರೆ ಬಡವರು ಮತ್ತು ನೌಕರವರ್ಗದವರಿಗೆ ಎಲೆಕ್ಟ್ರಿಸಿಟಿ ಚಾರ್ಜು ಎಷ್ಟು ಬರುತ್ತದೆ ಅವರ ಗತಿ ಏನು ? ನನ್ನ ಸ್ವಂತ ಅನುಭವವನ್ನೇ ಹೇಳುವುದಾದರೆ ನಮ್ಮ ಮನೆಯಲ್ಲಿಯೇ ಒಂದು ತಿಂಗಳಿಗೆ ೧೨ ರೂಪಾಯಿ ಬರುತ್ತಿದ್ದುದು ೨೩—೨೪ ರೂಪಾಯಿ ಎಲೆಕ್ಟ್ರಿಸಿಟಿ ಚಾರ್ಜು ಬರುವುದಕ್ಕೆ ಪ್ರಾರಂಭವಾಯಿತು, ಇಂಥಾ ಮೀಟರುಗಳನ್ನು ಮನೆಗಳಿಗೆ ಹಾಕಿದ್ದಾರೆ. ಆಂಧ್ರದ ಫರ್ಮಿನಿಂದಲೋ ಅಥವಾ ಹೈದರಾಬಾದ್ ಫರ್ಮಿನಿಂದಲೋ ಮೀಟರುಗಳನ್ನು ತರಿಸುತ್ತಿದ್ದಾರೆಂದು ಕಾಣುತ್ತದೆ. ಸಾರ್ವಜನಿಕ ಹಣವನ್ನು ಹಾಕಿ ಇಂಥಾ ಡಿಫೆಕ್ಟಿವ್ ಮೀಟರುಗಳನ್ನು ತರಿಸಿ ಹಾಕುವುದು ಸರಿಯಲ್ಲ. ನಾನು ಎಲೆಕ್ಟ್ರಿಸಿಟಿ ಆಫೀಸಿಗೆ, ನಮ್ಮ ಮನೆಗೆ ಹಾಕಿರತಕ್ಕ ಮೀಟರ್ ಸರಿಯಾಗಿಲ್ಲ ಎಂದು ಅರ್ಜಿ ಕೊಟ್ಟ ಮೇಲೆ ಎಷ್ಟೋ ದಿವಸಗಳ

(ಶ್ರೀ ಎಸ್. ಬಂಗಾರಪ್ಪ)

ನಂತರ ಬೇರೆ ಮೀಟರನ್ನು ತಂದು ಹಾಕಿದರು. ಆಗ ಮತ್ತೆ ೧೧ ೧/೨ ಚಿಲ್ಲರೆ ೧೨ ರೂಪಾಯಿ ಎಲೆಕ್ಟ್ರಿಸಿಟಿ ಚಾರ್ಜ್ ಬಂತು. ೫—೬ ತಿಂಗಳು ೨೩—೨೪ ರೂಪಾಯಿ ಬರುತ್ತಿತ್ತು. ಈ ರೀತಿಯಾಗಿ ಡೊಮೆಸ್ಟಿಕ್ ಮೀಟರುಗಳು ಪ್ರಮೋಷನ್ ಕೊಡಂತ್ತಿವೆ. ಅಂಥಾ ಮೀಟರುಗಳನ್ನು ಎಂ.ಎಸ್.ಇ.ಬಿಯವರು ಖರೀದಿ ಮಾಡಿದ್ದಾರೆ. ಇಷ್ಟೊಂದು ಹಣವನ್ನು ಖರ್ಚು ಮಾಡಿ ಇಂಥಾ ಡಿಫೆಕ್ಟಿವ್ ಮೀಟರಂಗಳನ್ನು ಕೊಂಡು ಕೊಳ್ಳುವುದು ಸರಿಯಲ್ಲ. ಎಂ.ಎಸ್.ಇ.ಬಿಯಲ್ಲಿ ದೊಡ್ಡ ದೊಡ್ಡ ಇಂಜಿನಿಯರುಗಳು, ಮೆಕಾನಿಕ್‌ಗಳು ಇದ್ದರೂ ಅವರ ಒಂದು ಅಭಿಪ್ರಾಯವನ್ನು ಪಡೆಯದೆ ಅಷ್ಟೊಂದು ಹಣವನ್ನು ಕೊಟ್ಟು ಡಿಫೆಕ್ಟಿವ್ ಮೀಟರುಗಳನ್ನು ಕೊಂಡುಕೊಂಡಿದ್ದಾರೆ. ಈ ರೀತಿ ದುರುಪಯೋಗ ಏತಕ್ಕೆ ಆಗುತ್ತದೆ ? ಇದೇ ರೀತಿ ಎಂ.ಎಸ್.ಇ.ಬಿಯಲ್ಲಿ ವ್ಯವಹಾರ ಮುಂದುವರಿದರೆ ಗತಿಯೇನು ? ಈ ರೀತಿ ದುರ್ವ್ಯವಹಾರ ನಡೆಯುತ್ತಿದೆ, ಈ ಬಗ್ಗೆ ಕಣ್ಣಲ್ಲಿ ಕಣ್ಣಿಟ್ಟು ಸರ್ಕಾರ ಗಮನ ಕೊಡಬೇಕಾಗುತ್ತದೆ. ಆದಕ್ಕೋಸರ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಚನ್ನಬಸಪ್ಪನವರು ತಮ್ಮ ಗಮನವನ್ನು ಹರಿಸಬೇಕು ಎಂದು ನಾನು ಹೇಳುತ್ತೇನೆ.

ಮಾನ್ಯ ಚನ್ನಬಸಪ್ಪನವರು ಇದಕ್ಕೆ ಗಮನ ಕೊಡದಿದ್ದರೆ, ಅವರನ್ನೂ ನಾವು ಬಯಲಿಗೆ ಎಳೆಯ ಬೇಕಾಗುತ್ತದೆ. ಮಾನ್ಯ ಸಚಿವರಲ್ಲಿ ನಾನು ಕೇಳುವುದು ಇಷ್ಟೆ. ಈ ಮೈಸೂರು ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಬಹಳ ದುರ್ವ್ಯವಹಾರ ನಡೆದಿದೆ. ಇದನ್ನು ಸರಿಪಡಿಸಲು ಇದಕ್ಕೆ ಒಂದು ನ್ಯಾಯಾಂಗ ತನಿಖೆ ನಡೆಸಬೇಕು. ಇಲ್ಲಿ ಕೋಟಿ ಕೋಟಿ ರೂಪಾಯಿಗಳನ್ನು ಲಪಟಾಯಿಸಿದ್ದಾರೆ. ಮತ್ತು ಅಲ್ಲಿ ಬಹಳ ದುಂದುವೆಚ್ಚ ಮಾಡಿ ಹಲವಾರು ಕೆಟ್ಟ ಅಗ್ರಿಮೆಂಟುಗಳನ್ನು ಸಹ ಮಾಡಿಕೊಡಿದ್ದಾರೆ. ಆ ಅಗ್ರಿಮೆಂಟುಗಳನ್ನು ಈಗ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಮಾಡಿಕೊಂಡಂತಹ ಪಾರ್ಟಿಯವರು ಅಂಥವರು. ಅವರು ಕೋರ್ಟಿಗೆ ಹೋಗುತ್ತಾರೆ. ಇದರಿಂದ ನೀವು ಏನು ಸಮಾಜವಾದ ವನ್ನು ತರುತ್ತೇವೆಂದು ಹೇಳುತ್ತಿದ್ದೀರಿ, ಅದನ್ನು ತರುವುದಕ್ಕೆ ನಿಮಗೆ ಸಾಧ್ಯವಾಗುವುದಿಲ್ಲ, ಆದ್ದರಿಂದ ಇದರ ಬಗ್ಗೆ ಒಂದು ನ್ಯಾಯಾಂಗ ವಿಚಾರಣೆ ನಡೆಸಿ ಇದರ ವಿಚಾರವೆಲ್ಲಾ ಸಂಪೂರ್ಣವಾಗಿ ಹೊರಗೆ ಬರಬೇಕು. ಆದ್ದರಿಂದ ಈ ಒಂದು ನ್ಯಾಯಾಂಗ ತನಿಖೆಯನ್ನು ಮಾಡುವುದಕ್ಕೆ ಮಾನ್ಯ ಸಚಿವರು ಏರ್ಪಾಡು ಮಾಡಬೇಕೆಂದು ಕೇಳಿಕೊಂಡು, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI H. M. CHANNABASAPPA.—Mr. Deputy Speaker, Sir, The Hon. Member who has spoken just a few minutes ago, has given us several materials and in order to enable me to assess facts and try to give a correct picture of the whole thing, to this House, I shall be very grateful to him if he passes on the information he has in his possession well before I answer, so that I might collect the information anp present a correct picture. Otherwise, it would be difficult for me to get information straightaway without facts. I hope he will kindly co-operate.

ಶ್ರೀ ಎಸ್. ಬಂಗಾರಪ್ಪ.—ಎಷ್ಟು ಸಾಧ್ಯವೋ ಅಷ್ಟು ಒದಗಿಸುವುದಕ್ಕೆ ಪ್ರಯತ್ನ ಮಾಡೋಣ. ಅದೂ ಈ ದಿನ ಸಾಧ್ಯವಾಗುವುದಿಲ್ಲ ; ನಾಳೆ ಒದಗಿಸಬಹುದು.

SRI H. M. CHANNABASAPPA.—Let him pass on whatever is available with him. I do not say he has got everything in his possession. I can understand the disabilities of the Member, I wish to know from you Sir, whether the debate will continue tomorrow also.

MR. DEPUTY SPEAKER.—It shall continue this evening ; we will have a little time tomorrow also, if necessary.

Sri H. M. Channabasappa. It is better if he passes on this information before I reply. If he gets this information by this evening I would be very grateful.

Mr. Deputy Speaker.—The hon. Member will please make efforts to get the information by that time.

Sri H. M. Channabasappa.—Let him give as much as he has got readily at hand.

Mr. Deputy Speaker.—The hon. Member will please give the information now available with him immediately to the Hon Minister.

† ಶ್ರೀ ಕೆ. ಪ್ರಭಾಕರ್ (ವರ್ತೂರು).—ಮಾನ್ಯ ಅಧ್ಯಕ್ಷರೆ, ಇದುವರೆಗೂ ನಡೆದ ಚರ್ಚೆಯಲ್ಲಿ ವಿದ್ಯುಚ್ಛಕ್ತಿ ಇಲಾಖೆಯ ಆಗುಹೋಗುಗಳ ಕುರಿತು ಒಂದು ಚಿತ್ರವನ್ನು ನಮ್ಮ ಮಾನ್ಯ ಮಿತ್ರರಾದ ಬಂಗಾರಪ್ಪನವರು ತಂದು ಕೊಟ್ಟಿದ್ದಾರೆ. ಈ ವಿದ್ಯುಚ್ಛಕ್ತಿ ಇಲಾಖೆಯು ಸಂಪೂರ್ಣವಾಗಿ ಒಂದು ಕಾಲದಲ್ಲಿ ಸರ್ಕಾರದ ಕೈಯಲ್ಲಿ ಇತ್ತು ಆದರೆ ದಿನೇ ದಿನೇ ಅದರಿಂದ ಜನರಿಗೆ ಅಷ್ಟು ಉಪಕಾರ ಆಗಲಿಲ್ಲ ಮತ್ತು ಅದು ಕುಂಠಿತವಾಗುತ್ತಿದೆಯಾದ್ದರಿಂದ ಎಲೆಕ್ಟ್ರಿಸಿಟಿ ಬೋರ್ಡು ಎಂದು ವ್ಯವಸ್ಥೆ ಮಾಡಿ ಅದರ ಕೈಗೆ ಕೊಟ್ಟರೆ ಈ ತೊಂದರೆಗಳೆಲ್ಲ ತಪ್ಪಿ ನೇರವಾಗಿ ಜನತೆಗೆ ಸಹಾಯವಾದೀತು ಎಂಬ ನಂಬಿಕೆಯಿಂದ ಇದನ್ನು ಮಾಡಿದ್ದಾರೆ. ಅದೇ ರೀತಿ ಅದಕ್ಕೆ ಬೇಕಾದ ಹಣಕಾಸಿನ ವ್ಯವಸ್ಥೆ ಮಾಡಿ, ಸಾಕಷ್ಟು ಕೆಲಸ ಮಾಡುವುದಕ್ಕೆ ಹಣಕ್ಕೆ ಗ್ಯಾರೆಂಟಿ ಕೊಟ್ಟು ಒಂದು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಈ ವಿದ್ಯುಚ್ಛಕ್ತಿ ಇಲಾಖೆಯು ಮೂರು ನಾಲ್ಕು ಕೇಂದ್ರಗಳನ್ನು ಮಾಡಿ, ಅಲ್ಲಿಂದ ಬರತಕ್ಕಂತಹ ವಿದ್ಯುಚ್ಛಕ್ತಿಯನ್ನು ಕೇಂದ್ರೀಕರಿಸಿ, ಅಲ್ಲಿಂದ ವಿದ್ಯುಚ್ಛಕ್ತಿ ವಿತರಣೆ ಮತ್ತು ಹಂಚಿಕೆ ಮಾಡುತ್ತಿದ್ದಾರೆ. ಇಲ್ಲಿಯವರೆಗೆ ಈ ಕಾರಣಗಳಿಂದ ಸರ್ಕಾರದಿಂದ ಆಗುತ್ತಿದ್ದ ಸೇವೆಗಿಂತಲೂ, ಬೋರ್ಡಿನಿಂದ ಹೆಚ್ಚಿನ ಕೆಲಸವಾಗುತ್ತದೆ ಎಂದು ನಮ್ಮೆಲ್ಲರ ಮನಸ್ಸಿನಲ್ಲಿತ್ತು. ಆದರೂ ನಮಗೆ ಇವತ್ತು ಎಷ್ಟು ಅದರ ಕೆಲಸದಿಂದ ತೃಪ್ತಿಯಾಗಬೇಕೋ ಅಷ್ಟು ಆಗಿಲ್ಲ. ಜನರಿಗೆ ಈ ಬೋರ್ಡು ಮಾಡಿದ್ದರಿಂದ ಎಷ್ಟು ಉಪಕಾರವಾಗಬೇಕಾಗಿತ್ತೋ ಅದು ಸಾಕಷ್ಟು ಆಗಲಿಲ್ಲ. ಅದು ಬೋರ್ಡು ಇದ್ದರೇನು, ಅಥವಾ ಸ್ಟ್ಯಾಚುಟರಿ ಕಮಿಟಿ ಇದ್ದರೇನು ? ಸಾಧಾರಣವಾಗಿ ಅಲ್ಲಿರತಕ್ಕಂತಹ ತೊಡಕುಗಳು ಇದ್ದ ಹಾಗೆಯೇ ಇವೆ. ಎಲ್ಲಾ ಇಲಾಖೆಗಳಲ್ಲಿ ಕೂಡ ಡೀಸೆಂಟ್ರಲೈಷೇಶನ್ ಆಫ್ ಪವರ್ ಮಾಡಿ ಹೆಚ್ಚಿನ ತೊಡಕುಗಳನ್ನು ನಿವಾರಣೆ ಮಾಡುತ್ತಾರೆ. ಆದರೆ ವಿದ್ಯುಚ್ಛಕ್ತಿ ಮತ್ತು ಪಿಡಬ್ಲ್ಯೂಡಿ ಇಲಾಖೆಗಳಲ್ಲಿ ವಿಕೇಂದ್ರೀಕರಣ ಮಾಡಿದರೂ ಅಷ್ಟು ಪ್ರಯೋಜನ ಜನತೆಗೆ ಸಿಗಲಿಲ್ಲ. ಆದರೆ ಈ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ವಿಕೇಂದ್ರೀಕರಣ ಮಾಡಿದುದರಿಂದ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ಏನಿದೆಯೋ ಅವುಗಳಲ್ಲಿ ಮಾತ್ರ ತಕ್ಕಮಟ್ಟಿಗೆ ಫಲ ದೊರೆಯುತ್ತಿದೆ. ಆದರೆ ವಿದ್ಯುಚ್ಛಕ್ತಿ ಇಲಾಖೆಯಲ್ಲಿರುವ ಟೆಕ್ನಿಕಲ್ ವಿಚಾರದಲ್ಲಿ ಹೆಚ್ಚು ಹೆಚ್ಚು ವಿಕೇಂದ್ರೀಕರಣ ಮಾಡಿದರೂ ಅಷ್ಟು ಲಾಭದಾಯಕವಾಗಿ ಆಗಿಲ್ಲ. ಇಲ್ಲಿರತಕ್ಕಂತಹ ಕೊರತೆಗಳು ಇದ್ದ ಹಾಗೆಯೇ ಇವೆ. ಈ ಕೊರತೆಯನ್ನು ನಿವಾರಣೆ ಮಾಡತಕ್ಕಂಥದ್ದು ನಿಜವಾಗಿಯೂ ಕಷ್ಟತರವಾದ ಕೆಲಸ. ದಿನೇ ದಿನೇ ಸಮಸ್ಯೆಗಳು ಹೆಚ್ಚುತ್ತಾ ಇರುವುದರಿಂದ ಅನೇಕ ತೊಂದರೆಗಳು ಬಂದೇ ಬರುತ್ತವೆ. ಮುಖ್ಯವಾಗಿ ಎಲೆಕ್ಟ್ರಿಕ್ ಲೈನುಗಳನ್ನು ಹಾಕತಕ್ಕ ಪದ್ಧತಿ ಅಷ್ಟು ಸರಿಯಾಗಿಲ್ಲ. ಅಮೇರಿಕಾ ದೇಶದಲ್ಲಿ ಯಾವ ರೀತಿಯಲ್ಲಿ ಮಾಡುತ್ತಾರೆಂದರೆ, The main lines, whether they are wanted immediately or not, they are bound to go on, so as to facilitate the minor details of the services in the near future. ಆ ರೀತಿಯ ಪದ್ಧತಿಯನ್ನು ಅವರು ಅನುಸರಿಸುತ್ತಿದ್ದಾರೆ ನಮ್ಮ ದೇಶದಲ್ಲಿ ಒಂದು ಲೈನ್ ಹಾಕಿ ಅಂದರೆ, ಅದಕ್ಕೆ ಮೊದಲು ಪ್ರಯತ್ನ ಮಾಡುತ್ತಾರೆ. ಆದರೆ ಅದು ಕೊನೆಯ ಹಂತಕ್ಕೆ ಬರಬೇಕಾದರೆ, ಅದಕ್ಕೆ ನಾನಾ ಅಡಚಣೆಗಳು ಬರುತ್ತವೆ. ಇಂತಹ ಸಾಮಾನು ಇಲ್ಲ, ಅಂಥ ಸಾಮಾನು ಇಲ್ಲವೆಂದು ಹೇಳುತ್ತಾ ಇರುವುದರಿಂದ, ಜನತೆಗೆ ಬೇಸರವಾಗುವ ಹಾಗೆ ಆಗಿದೆ. ಇದರಿಂದ ಸಾಕಷ್ಟು ಪ್ರಯೋಜನ ಜನತೆಗೆ ದೊರೆಯದೆ ಈ ತೊಂದರೆಗಳು ಮುಂದುವರಿಯುತ್ತಾ ಇವೆ. ಆದ್ದರಿಂದ ಎಲೆಕ್ಟ್ರಿಸಿಟಿ ಬೋರ್ಡಿನವರು ಈ ಮೈನ್ ಲೈನ್ಸ್ ಹಾಕುವ ಪದ್ಧತಿ ಏನಿದೆ ಅದರಲ್ಲಿ ಒಂದು ಜನತೆಗೆ ಅನುಕೂಲವಾಗುವ ರೀತಿಯನ್ನು ಅನುಸರಿಸಿ, ಒಳ್ಳೆಯ ರೀತಿಯಲ್ಲಿ ಮಾಡಬೇಕಾಗಿದೆ. ಇವರ ರಿಪೋರ್ಟಿನಲ್ಲಿ ಯಾವ ರೀತಿಯಲ್ಲಿ ಮಾಡುತ್ತಿದ್ದಾರೆಂದು ಗೊತ್ತಾಗುತ್ತದೆ.

(ಶ್ರೀ ಕೆ. ಪ್ರಭಾಕರ್ ವರ್ತ್ರೀರು)

ಅದರಲ್ಲೇನೋ ಒಂದು ಸಾಂಪ್ರದಾಯಕವಾದ ಅಭಿಪ್ರಾಯ ಇದೆ. ಇದರಲ್ಲಿರತಕ್ಕ ಚಿಕ್ಕ ಪುಟ್ಟ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನಪಟ್ಟಹಾಗೆ ಕಾಣುತ್ತದೆಂದು ನನಗನ್ನಿಸುತ್ತದೆ. ಇಂತಹ ಮೇಯಿನ್ ಲೈನ್ ಏನಿದೆಯೋ ಅದಕ್ಕೆ ಎಲೆಕ್ಟ್ರಿಸಿಟಿ ಮುಖ್ಯ. ಇರ್ರಿಗೇಷನ್, ಇಂಡಸ್ಟ್ರಿ ಮತ್ತು ಹೋಂ ಕನ್‌ಸಂಪ್‌ಷನ್‌ಗೆ ಎಲೆಕ್ಟ್ರಿಸಿಟಿ ಬೇಕಾಗುತ್ತದೆ. ಅದರಲ್ಲಿ ಮೇಯಿನ್ ಲೈನ್ ಹಾಕಿರುವುದು ಪ್ರಧಾನ ಕಾರ್ಯ. ಇದನ್ನು ನಮ್ಮ ಯೋಜನೆಗಳಲ್ಲಿ ಕಾರ್ಯಗತಮಾಡಬೇಕಾಗಿದೆ. ಇನ್ನು ವಿದ್ಯುಚ್ಛಕ್ತಿ ಮಾರಾಟ ವಿಷಯದಲ್ಲಿ ಅದನ್ನು ಮದ್ರಾಸಿಗೆ ಕೊಡಲಿ ಅಥವಾ ಮಹಾರಾಷ್ಟ್ರಕ್ಕೇ ಕೊಡಲಿ ಕೊಡತಕ್ಕ ರೀತಿಯಲ್ಲಿ ಮೈಸೂರಿಗೆ ಇರತಕ್ಕ ಸೌಭಾಗ್ಯಗಳನ್ನು ಮೊದಲು ಗಮನಿಸಬೇಕು. ನಮ್ಮ ರಾಜ್ಯದಲ್ಲಿ ಕರೆಂಟ್ ಉತ್ಪನ್ನ ಮಾಡುವುದರಲ್ಲಿ ಹಾಗೂ ಶ್ರೀಗಂಧ ಉತ್ಪನ್ನ ಮಾಡುವುದರಲ್ಲಿ ಏನು ಪ್ರಕೃತಿ ಸೌಂದರ್ಯವಿದೆಯೋ ಅದು ಬೇರೆ ಇನ್ನಾವ ಸಂಸ್ಥಾನಗಳಿಗೂ ಇಲ್ಲದೇ ಇರುವುದರಿಂದ ನಾವು ಈಗ ಉತ್ಪನ್ನ ಮಾಡುವ ವಿದ್ಯುಚ್ಛಕ್ತಿಯನ್ನು ಹೆಚ್ಚು ಲಾಭದಾಯಕವಾಗಿ ಮಾಡಬೇಕು.

ಮೈಸೂರು ಸರ್ಕಾರದವರು ಉತ್ಪನ್ನ ಮಾಡತಕ್ಕ ವಿದ್ಯುಚ್ಛಕ್ತಿ ಏನಿದೆಯೋ ಅದನ್ನು ಸಲಭವಾಗಿ ವ್ಯಾಪಾರ ಮಾಡಬಲ್ಲರೆಂಬ ಶಂಕೆ ಇಲ್ಲ. ಈ ಕಾರಣಗಳಿಂದ ಇದರ ವ್ಯವಸ್ಥೆ ಏನಿದೆಯೋ ಅದು ಅಷ್ಟು ಲಾಭದಾಯಕವಾಗಿಯೋ ಇಲ್ಲವೆಂಬುದನ್ನು ಪರಿಶೀಲನೆಮಾಡಿ ಹೆಚ್ಚು ಲಾಭ ಬರುವಂತೆ ಮಾಡಬೇಕು. ಮಾನ್ಯ ಶ್ರೀ ಬಂಗಾರಪ್ಪನವರು ಹೇಳಿದಂತೆ ಇದರಲ್ಲಿರತಕ್ಕ ವರಮಾನ ಇತ್ತೀಚಿಗೆ ಬಹಳವಾಗಿ ಸೋರಿ ಹೋಗುತ್ತಿದೆ. ಹೆಚ್ಚು ವರಮಾನ ಇದ್ದರೂ ಕೂಡ ಅದರ ಬಗ್ಗೆ ಸರಿಯಾದ ಕಂಟ್ರೋಲ್ ಇಲ್ಲದೇ ಇರುವುದರಿಂದ ವಿಪರೀತವಾಗಿ ದುಂದು ವೆಚ್ಚವಾಗಿ ಹಣ ಹಾಳಾಗಿ ಹೋಗುತ್ತಿದೆ. ಅದರ ಚಿತ್ರವನ್ನೂ ಸಹ ಕೊಟ್ಟಿದ್ದೇನೆ. ಎಲೆಕ್ಟ್ರಿಸಿಟಿ ಮಾರಾಟದಿಂದ ಹೆಚ್ಚು ಲಾಭ ಬರುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಇನ್ನು ರಸೀಟ್ಸ್ ಅಂಡ್ ಎಕ್ಸ್‌ಪೆಂಡಿಚರ್ ಸ್ಟೇಟ್‌ಮೆಂಟುಗಳನ್ನು ನೋಡಿದರೆ ಅನೇಕ ಸಂದರ್ಭಗಳಲ್ಲಿ ಸರಿಯಾದ ಅಂಕಿ ಅಂಶಗಳೇ ಇಲ್ಲ. ಸರ್ಕಾರದವರೂ ಸಹ ಅದನ್ನು ವಿವರವಾಗಿ ಕೊಟ್ಟಿಲ್ಲ. ರೇಟ್ ಬದಲಾಯಿಸಿ ಹಾಕಬೇಕೋ ಏನೋ ಗೊತ್ತಿಲ್ಲ. ಇದರಲ್ಲಿ ಮೇಯಿನ್ ಸೋರ್ಸಸ್ ಬಹಳವಾಗಿ ಇರುವಾಗ, ಅದನ್ನು ಎನೂ ತೋರಿಸಿಲ್ಲ. ರಿಸೋರ್ಸಸ್ ಫ್ರಮ್ ದಿ ಇಂಡಸ್ಟ್ರಿಯಲಿಸ್ಟ್ಸ್ ಎಂಬುದರಲ್ಲಿ ಕಾಲಂ ೮ ಮತ್ತು ೯ ರಲ್ಲಿ ಹೇಳಿರುವುದನ್ನು ನೋಡಿದರೆ ರೆಸೀಟ್ಸ್ ಎಲ್ಲಾ ಕಾಲದಲ್ಲಿಯೂ ಬ್ಲಾಂಕ್ ಇದೆ. ಏಕೆ ಈ ರೀತಿಯಾಗಿದೆಯೋ ಗೊತ್ತಿಲ್ಲ. ಅಪೆಂಡಿಕ್ಸ್ (ಬಿ) ನಲ್ಲಿ ರಸೀಟ್ಸ್ ವಿಷಯ ಚೆನ್ನಾಗಿ ಹೇಳಿದೆ. ವರಮಾನವನ್ನು ಹೆಚ್ಚಿಸಬೇಕಾದರೆ ಈ ಕಾಲಂನ್ನು ಸುಸಂಘಟಿತವಾಗಿ ನೋಡಬೇಕೆಂದು ನನಗನ್ನಿಸುತ್ತದೆ.

ದೊಡ್ಡದೊಡ್ಡ ಮ್ಯಾನ್ಯುಫ್ಯಾಕ್ಚರರುಗಳಾಗಲೀ, ಅಥವಾ ಚಿನ್ನದ ಗಣಿಗೆ ಕರೆಂಟ್ ತೆಗೆದುಕೊಳ್ಳುವವರಿದ್ದರೆ ಅಂತಹವರಿಗೆ ಒಂದು ದಿವಸ ಕರೆಂಟ್ ಕೊಡದಿದ್ದರೆ ಕಂಪೆನಿಗೆ ಎಷ್ಟು ನಷ್ಟವೆಂಬುದನ್ನು ಯೋಚಿಸಬೇಕು. ಪ್ರತಿದಿವಸ ಮೀಟರ್ ಏನು ತೋರಿಸುತ್ತದೆ ಎಂಬುದನ್ನು ಗಮನಿಸುತ್ತಿರಬೇಕು. ಮೀಟರ್ಸ್ ಸರಿಯಾಗಿಲ್ಲದೇ ಅವರು ಹೆಚ್ಚಿಗೆ ಕರೆಂಟ್ ಉಪಯೋಗಿಸಿದರೆ ನಮಗೇ ನಷ್ಟ. ಆದ್ದರಿಂದ ಸರಿಯಾದ ಮೀಟರುಗಳ ಮುಖಾಂತರ ಇಲ್ಲವೆ ಆ ನಷ್ಟ ಏನು ನಡೆಯುತ್ತಿದೆಯೋ ಅದನ್ನು ತಪ್ಪಿಸಿ ಸುವ್ಯವಸ್ಥಿತವಾಗಿ ನಡೆಯುವಂತೆ ಮಾಡಬೇಕು. ಈ ಎಲೆಕ್ಟ್ರಿಸಿಟಿ ಇಲಾಖೆ ನಾನು ಮೊದಲೇ ಹೇಳಿದ ಹಾಗೆ ಅದು ಒಂದು ಟೆಕ್ನಿಕಲ್ ಡಿಪಾರ್ಟ್‌ಮೆಂಟ್. ಸಾರ್ವಜನಿಕರು ಅದರ ಸೌಲಭ್ಯವನ್ನು ಉಪಯೋಗಿಸಿಕೊಂಡು ಹಣ ಕಟ್ಟುವಾಗ, ಸರ್ವಿಸ್ ಕೊಡುವುದರಲ್ಲಿ ಕೆಲವು ಚಿಕ್ಕ ಸಾಮಾನುಗಳು ಇಲ್ಲವೆಂದು ಹೇಳಿದರೆ ಅದು ಸರಿಹೋಗುವುದಿಲ್ಲ. ಇಂಥಾ ಸಾಮಾನು ಇಲ್ಲ. ಹೀಗೆ ಮಾಡಿ ಎಂದು ಜನರು ಹೇಳುವುದಕ್ಕಾಗುವುದಿಲ್ಲ. ಆಸ್ಪತ್ರೆಯಲ್ಲಿ ಔಷಧಿ ಇಲ್ಲವೆಂದು ಹೇಳಿದರೆ, ಹೊರಗಿನಿಂದ ತಂದು ಕೊಡಿ ಎಂದು ಹೇಳುವ ಹಾಗೆ ಇಲ್ಲಿ ಇರಬಾರದು. ಅನೇಕ ಸಂದರ್ಭಗಳಲ್ಲಿ ಸರ್ವೀಸ್ ಕೊಡತಕ್ಕ ವರ್ಕಮನ್ ಇರುವುದಿಲ್ಲ. ಇದರ ಬಗ್ಗೆ ತಜ್ಞರು ಪರಿಶೀಲನೆ ಮಾಡಬೇಕು. ಅಲ್ಲಿ ಒಬ್ಬ ಚಿಕ್ಕ ವರ್ಕಮನ್ ಇಲ್ಲವೆಂದು ಹೇಳಿದರೆ ಅಲ್ಲಿನ ಪೂರ್ತಿ ಕೆಲಸ ನಿಲ್ಲುತ್ತದೆ. ಇದು ತಪ್ಪಬೇಕು.

ಇನ್ನು ಸ್ಟೋರ್ಸ್ ಪರ್ಚೇಜಿಸಿನಿಂದ ಹೋದವರ್ಷ ೨೨೨ ಚಿಲ್ಲರೆ ಸಾಮಾನುಗಳನ್ನು ವ್ಯಾಪಾರ ಮಾಡಿದ್ದಾರೆ. ಈ ಸಲ ೧೪೧ ಸಾಮಾನುಗಳನ್ನು ವ್ಯಾಪಾರ ಮಾಡುವುದಕ್ಕೆ ಆರ್ಡರ್ ಕೊಟ್ಟಿದ್ದಾರೆ. ಹೋದಸಾರಿ ಕೋಟ್ಯಾಂತರ ರೂಪಾಯಿಗಳ ಸಾಮಾನು ಬರುವ ಅವಕಾಶವಿತ್ತು. ಈ ವರ್ಷ ಏನೂ ಇಲ್ಲ. ಪ್ರತಿವರ್ಷ ಇಷ್ಟೇ ಅಮೌಂಟ್ ಕೇಳಬೇಕೆಂದೇನೂ ಇಲ್ಲ, ಒಂದು ಸಾರಿ ಇಂಡೆಂಟ್ ಹೋದಮೇಲೆ ಮತ್ತೆ ಕೇಳಬೇಕಿಲ್ಲವೆಂಬ ಸಮಜಾಯಿಷಿ ಕೊಡುತ್ತಿದ್ದಾರೆ.

ಅದಕ್ಕಾಗಿ ಒಂದು ಫುಟ್‌ನೋಟಿನಲ್ಲಿ ಕಾರಣ ಕೊಡಬೇಕು. ಕಂಬಗಳನ್ನು ತಯಾರು ಮಾಡತಕ್ಕ ಕೇಂದ್ರಗಳನ್ನು ಡಿಸ್ಟ್ರಿಕ್ಟ್‌ವೈಜ್ ಆಗಿ ಕೊಟ್ಟಿದ್ದಾರೆ. ಕೇಂದ್ರಗಳನ್ನು ಡಿಸ್ಟ್ರಿಬ್ಯೂಟ್ ಮಾಡಿದ್ದಾರೆ. ಕಂಬಗಳನ್ನು ತಯಾರುಮಾಡುವ ಕೇಂದ್ರಗಳನ್ನು ಸುವ್ಯವಸ್ಥಿತವಾಗಿ ಮಾಡುವುದಕ್ಕೆ ಅವಕಾಶವಿದೆ. ಇನ್ನು ಐ ಪಿ. ಸೆಟ್ಟುಗಳನ್ನು ರೈತರಿಗೆ ಕೊಡುವ ವಿಷಯದಲ್ಲಿ ಇನ್ನೂ ೪೨ ಸಾವಿರ ಅರ್ಜಿಗಳು ಇವೆಯೆಂದು ಹೇಳಿದ್ದಾರೆ. ಇನ್ನು ಎಷ್ಟು ರೈತರು ಅದನ್ನು ಕೇಳುತ್ತಾರೆಂಬುದನ್ನು ಮನದಟ್ಟು ಮಾಡಿಕೊಳ್ಳುವುದು ಒಳ್ಳೆಯದು. ಇದು ಅಡ್ಮಿನಿಸ್ಟ್ರೇಟಿವ್ ಸೈಡ್. ರೈತರಿಗೆ ಗೊತ್ತಾಗುವುದಿಲ್ಲ. ಜನ ಕೇಳಿದರೆ ನಮಗೆ ಇಷ್ಟೇ ಕೊಡುವ ಶಕ್ತಿ ಇದೆಯೆಂದು ಹೇಳುತ್ತಾರೆ. ಇದರಿಂದ ಜನ ಬೇಜಾರಾಗುವುದೂ ಉಂಟು. ಜಿಲ್ಲಾವಾರು ಎಷ್ಟು ಕೊಡುತ್ತಾರೆಂಬ ಬಗ್ಗೆ ಲೆಕ್ಕ ಇಲ್ಲ. ಎಷ್ಟು ಐ.ಪಿ. ಸೆಟ್ಟುಗಳ ಸಪ್ಲೈ ಇದೆಯೋ ಹಾಗೂ ಡಿಮ್ಯಾಂಡ್ ಇರುತ್ತದೋ ಅದನ್ನು ನೋಡಿಕೊಂಡು ಮಂಜೂರು ಮಾಡಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ:- ಐ ಪಿ. ಸೆಟ್ಟುಗಳನ್ನು ಕೊಡತಕ್ಕದ್ದನ್ನು ಇಡೀ ೨೦—೩೦ ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವಂಥ ಒಂದೊಂದು ತಾಲ್ಲೂಕಿಗೆ ಹಂಚುವುದಿಲ್ಲ. ಎಲ್ಲೆಲ್ಲಿ ಇರ್ರಿಗೇಷನ್ ಪೊಟೆನ್ಷಿಯಲ್ ಇದೆಯೆಂದು, ಬಾವಿಗಳನ್ನು ತೆಗೆದುಕೊಂಡಿದ್ದಾರೆ ಅವರು ಮನೆಗಳನ್ನು ಕಟ್ಟಿ ನಮಗೆ ಪವರ್ ಬೇಕು ಎಂಬುದಾಗಿ ಯಾರಾದರೂ ಅರ್ಜಿ ಹಾಕುವುದಾದರೆ ಆಗ ಯಾವ ಅರ್ಜಿಗೇ ಆಗಲೀ ಅದನ್ನು ಎಷ್ಟು ಕೇಳಿದರೂ ಕೊಡಲಾಗುತ್ತದೆ. ಅದರಲ್ಲಿ ಏನೂ ತೊಂದರೆ ಇಲ್ಲ. ಅನೇಕ ರೈತರು ಈ ವಿಧಿನಿಯಮಗಳ ಪ್ರಕಾರ ಮಾಡಬೇಕಾದ ಕೆಲಸವನ್ನು ಮಾಡದೆ ಇದ್ದಾರೆಯೇ ವಿನಹ ಪವರ್ ಕೊಡುವುದರಲ್ಲಿ ಯಾವ ತೊಂದರೆಯೂ ಸಹ ಇರುವುದಿಲ್ಲ.

ಶ್ರೀ ಕೆ. ಪ್ರಭಾಕರ್:—ತಾವು ಈಗ ಹೇಳಿದ್ದು ನನಗೆ ಬಹಳ ಸಂತೋಷವಾಗಿದೆ. ಆದರೆ ಇಲಾಖೆ ಯಲ್ಲಿ ನಡೆದಿರುವ ರೀತಿ ನನಗೆ ಸಮಂಜಸವಾಗಿಲ್ಲ. ಇವತ್ತಿನದಿವಸ ಯಾವುದಾದರೂ ಒಂದು ತಾಲ್ಲೂಕಿನ ಐ.ಪಿ. ಸೆಟ್ಸ್ ಪೆಂಡಿಂಗ್ ಅರ್ಜಿಗಳು ಎಷ್ಟುವೆಯೆಂದು ಕೇಳಿದರೆ ಗೊತ್ತಾಗುತ್ತದೆ. ಈ ರೀತಿ ಆದರೆ ರೈತರನ್ನು ನಿಜವಾಗಿ ಸಮಾಧಾನ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಅವರಿಗೆ ಆಗುತ್ತಿರುವ ಅನಾನುಕೂಲಗಳನ್ನು ತಪ್ಪಿಸಬೇಕೆಂದು ನಾನು ಹೇಳುತ್ತಿದ್ದೇನೆ.

ಲೋಕಲ್ ಕಂಟ್ರಾಕ್ಟರುಗಳಿಗೆ ಒಳಾಂಗಣಗಳಲ್ಲಿ ಹೆಚ್ಚು ಕೆಲಸ ಮಾಡುವಂತಹ ಕಾಂಟ್ರಾಕ್ಟ್‌ಗಳನ್ನು ಕೊಡಬೇಕು. ಬೋರ್ಡ್‌ಗೆ ಕಂಟ್ರಾಕ್ಟರುಗಳ ಮೇಲೆ ಕಂಟ್ರೋಲ್ ಇಲ್ಲ. ಚೀಫ್ ಇನ್‌ಸ್ಪೆಕ್ಟರ್ ಎಂಬುವರು ಒಬ್ಬರು ಇರುತ್ತಾರೆ. ಅವರಿಗೆ ಅವರ ಮೇಲೆ ನೇರವಾದ ಕಂಟ್ರೋಲ್ ಇದೆ ಆ ರೀತಿ ಇದ್ದರೂ ಕಂಟ್ರಾಕ್ಟರ್ ಅವರ ಮಾತನ್ನು ಕೇಳುವುದಿಲ್ಲ. ಆತ ಏತಕ್ಕೆ ಕಂಪ್ಲೀಂಟ್ ಸರ್ಟಿಫಿಕೇಟ್ ಕೊಡಬೇಕು. ಅವನು ಷೆಡ್ಯೂಲ್ ರೇಟ್ ಪ್ರಕಾರ ಕೆಲಸ ಮಾಡಬೇಕು. ಅದು ಯಾವುದೂ ಮಾಡುವುದಿಲ್ಲ. ಆದ್ದರಿಂದ ಈ ಕೆಲಸವನ್ನು ಸರ್ಕಾರದವರೇ ವಹಿಸಿಕೊಂಡರೆ. ಆಗ ರೈತರಿಗೆ ಹೆಚ್ಚಿಗೆ ಪ್ರಯೋಜನವಾಗುತ್ತದೆ. ಆ ರೀತಿ ಸರ್ಕಾರ ಮಾಡಿದರೂ ಏನೂ ಚಿಂತೆಯಿಲ್ಲ.

4—30 P.M.

ಶ್ರೀ ಎಚ್. ಎಂ. ಚನ್ನಬಸಪ್ಪ:—ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡತಕ್ಕವರು ಎಂ. ಎಸ್. ಇ.ಬಿ ನವರು. ಅವರು ಕಂಟ್ರಾಕ್ಟರು ಸರಿಯಾಗಿ ಕೆಲಸ ಮಾಡಿದ್ದಾನೆಯೋ ಅಥವಾ ಇಲ್ಲವೇ ಎಂಬುವನ್ನು ಪರೀಕ್ಷೆ ಮಾಡತಕ್ಕದ್ದು ತಾಂತ್ರಿಕ ವಿಷಯಕ್ಕೆ ಸಂಬಂಧಪಟ್ಟಿದ್ದು. ಹಾಗಿರುವಾಗ ಈ ವಿದ್ಯುಚ್ಛಕ್ತಿಯನ್ನು ಕೊಡತಕ್ಕವರು ಮತ್ತು ತೆಗೆದುಕೊಳ್ಳತಕ್ಕವರು ಇಬ್ಬರೂ ಒಂದಾಗಿ ಕೆಲಸವನ್ನು ನಡೆಸತಕ್ಕದ್ದು ಸ್ವಾಭಾವಿಕ. ಆದರೆ ಅದರಿಂದ ಕೆಲವು ವೇಳೆ ಪವರನ್ನು ತೆಗೆದುಕೊಳ್ಳತಕ್ಕ ವ್ಯಕ್ತಿ ಪ್ರಾಣಾಪಾಯಕ್ಕೆ ಗುರಿಯಾಗತಕ್ಕ ಸಂಭವಗಳೂ ಉಂಟು. ಆದ್ದರಿಂದ ಈ ಸಂದರ್ಭದಲ್ಲಿ ಅವರಿಬ್ಬರಿಗೂ ಹಾಗೆ ಒಂದಾಗಿ ಕೆಲಸ ಮಾಡುವುದಕ್ಕೆ ಅವಕಾಶ ಕೊಡಬಾರದೆಂದೇ ನಾವು ಅದಕ್ಕೆ ಆದರೆ ಅವರು ಮಾಡಿರತಕ್ಕ ಕೆಲಸ ಸಮರ್ಪಕವಾಗಿದೆಯೋ ಇಲ್ಲವೇ ಎಂಬುದರ ಬಗ್ಗೆ ಸರ್ಟಿಫಿಕೇಟನ್ನು ಕೊಡತಕ್ಕ ಅಧಿಕಾರವನ್ನು ಒಬ್ಬ ಪ್ರತ್ಯೇಕ ಅಧಿಕಾರಿಗೆ ವಹಿಸಿದೆ. ಅವರು ಅಲ್ಲಿ ಮಾಡಿರತಕ್ಕ ವೈರಿಂಗ್ ಇತ್ಯಾದಿ ಎಲ್ಲವನ್ನೂ ಚೆಕ್ ಮಾಡಿ ಸರ್ಟಿಫಿಕೇಟನ್ನು ಕೊಟ್ಟ ನಂತರ ಅವರಿಗೆ ಪವರನ್ನು ಕೊಡಲಾಗುತ್ತದೆ. ಆದ್ದರಿಂದ ತಾವು ಈಗ ಏನು ಹೇಳುತ್ತಿದ್ದೀರಿ ಅದರಂತೆ ಕೆಲಸ ಮಾಡಿಸುವುದಕ್ಕಾಗುವುದಿಲ್ಲ.

ಶ್ರೀ ಕೆ. ಪ್ರಭಾಕರ್:—ಸ್ವಾಮಿ ಇನ್ನೊಂದು ವಿಚಾರವನ್ನು ನಾನು ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ಈ ದಿವಸ ವಿದ್ಯುತ್ ಇಲಾಖೆಯ ಬೋರ್ಡಿನವರು ರೈತರಿಗೆ ಆಯಾಯಾ ತಿಂಗಳ ಬಿಲ್ಲನ್ನು ಹಣ ವಸೂಲ್ಮಾಡತಕ್ಕ ಬಗ್ಗೆ ಕೊಡುತ್ತಿದ್ದಾರೆ. ಅದರಲ್ಲಿ ಅವರು ಹಿಂದಿನ ತಿಂಗಳ ಬಾಕಿ ಏನಿವೆ ಎಂಬುದನ್ನು ನಮೂದು ಮಾಡುತ್ತಿಲ್ಲ. ಇದರಿಂದ ಅನೇಕ ವೇಳೆ ರೈತರಿಗೆ ತೊಂದರೆಗಳಾಗುತ್ತಿವೆ. ಅಲ್ಲದೆ ಸರ್ಕಾರಕ್ಕೆ ಬರತಕ್ಕ ರೆವಿನ್ಯೂನಲ್ಲಿ ಹೆಚ್ಚು ಕಡಮೆ ಆಗುತ್ತಿದೆಯೋ ಇಲ್ಲವೆ ಎಂಬುದೂ ಕೂಡ ಗೊತ್ತಾಗುವುದಿಲ್ಲ.

ಇನ್ನು ಮೀಟರ್ ರೀಡಿಂಗ್‌ನ ಬಗ್ಗೆ ಆ ಫಾರಂನಲ್ಲಿ ಎಲ್ಲಾ ಕಾಲಂಗಳನ್ನೂ ಹಾಗೇ ಖಾಲಿ ಬಿಟ್ಟಿರುತ್ತಾರೆ. ಹಿಂದಿನ ತಿಂಗಳಲ್ಲಿ ಎಷ್ಟಿತ್ತು, ಈ ತಿಂಗಳಲ್ಲಿ ಎಷ್ಟು ಖರ್ಚಾಗಿದೆ. ಈ ಎರಡಕ್ಕೂ ವ್ಯತ್ಯಾಸ ನೋಡಿದರೆ ಕಳೆದ ತಿಂಗಳಿಗೂ ಮತ್ತು ಚಾಲ್ತಿ ತಿಂಗಳಿಗೂ ಪವರನ್ನು ಬಳಸಿರುವುದರಲ್ಲಿ ಏನಾದರೂ ವ್ಯತ್ಯಾಸವಿದೆಯೋ ಇಲ್ಲವೇ ಎಂಬುದನ್ನು ಕಂಡುಕೊಳ್ಳುವುದಕ್ಕೆ ಅದರಿಂದ ಸಾಧ್ಯವಾಗುತ್ತಿತ್ತು. ಆದರೆ ಆ ಕಾಲಂಗಳನೆಲ್ಲಾ ಹಾಗೇ ಖಾಲಿ ಬಿಡುತ್ತಿದ್ದಾರೆ. ಇದನ್ನು ಬಿಡದಂತೆ ಅವರಿಗೆ ತಿಳುವಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕ ಸಂದರ್ಭದಲ್ಲಿ ರೈತನಿಂದ ಸಕಾಲಕ್ಕೆ ಸಾಲದ ಕಂತುಗಳನ್ನು ವಸೂಲ್ಮಾಡದೆ ಬಿಟ್ಟುಬಿಟ್ಟು ಸಡನ್ನಾಗಿ ಯಾವುದೋ ಒಂದು ದಿನ ಬಂದು ಅವ ಐ. ಪಿ. ಸೆಟ್ಟಿಗೆ ಫಿಟ್ ಮಾಡಿದ್ದ ಮೀಟರನ್ನು ಕಿತ್ತುಹಾಕುತ್ತಿದ್ದಾರೆ. ಇದರಿಂದ ರೈತನಿಗೆ ಅನೇಕ ವೇಳೆ ಆತನ ಬೆಳೆ ಪೂರಾ ಒಣಗಿ ಹೋಗಿರತಕ್ಕ ನಿದರ್ಶನಗಳು ತಮಗೂ ಗೊತ್ತಿರಬೇಕು, ನನಗೂ ಗೊತ್ತಿದೆ. ಇಂಥದ್ದನ್ನು ತಪ್ಪಿಸಬೇಕು. ರೈತನ ಬೆಳೆಯನ್ನು ಒಣಗಿಸುವುದು ಸಾಧುವಾದದ್ದಲ್ಲ.

ಇನ್ನು ಎಲೆಕ್ಟ್ರಿಸಿಟಿ ಇಲಾಖೆಯವರು ತಮಗೆ ಬರತಕ್ಕ ರೆವಿನ್ಯೂ ಒಂದರಮೇಲೆ ಅವರ ದೃಷ್ಟಿಯಿಟ್ಟು ಕೆಲಸ ಮಾಡುವುದಕ್ಕಾಗುವುದಿಲ್ಲ. ಈ ಇಲಾಖೆಯಲ್ಲಿ ಕಂಬಗಳ ಮೇಲೆ ಹತ್ತಿ ಕೆಲಸ ಮಾಡತಕ್ಕ ಜನರೇನಿದ್ದಾರೆ ಅವರು ಅನೇಕ ವೇಳೆ ಅಪಾಯಕ್ಕೆ ತುತ್ತಾಗುತ್ತಿರುವುದನ್ನು ನಾವೆಲ್ಲರೂ ನೋಡಿದ್ದೇವೆ. ಹಾಗೆ ಅವರು ಕಂಬಗಳನ್ನು ಹತ್ತಿ ಕೆಲಸ ಮಾಡತಕ್ಕ ಸಂದರ್ಭದಲ್ಲಿ ಸತ್ತರೆ ಅವರ ಶವಸಂಸ್ಕಾರಕ್ಕಾಗಿ ಸಾವಡಿಗರ ಹುಡುಗ ಮಾಡಿದಂತೆ ಸತ್ತವರಿಗೆ ಒಂದು ಕಾಸನ್ನು ಹಾಕುವಂತೆ ಮಾಡುತ್ತಾನಲ್ಲಾ ಹಾಗೆ ಮಾಡುವುದು ನಾಚಿಗೇಡಿನ ಬದುಕು. ಅದಕ್ಕೆ ಇಲಾಖೆಯವರು ಒಂದು ಸುವ್ಯವಸ್ಥೆಯನ್ನು ಮಾಡುವುದು ಅಗತ್ಯವಾದದ್ದು. ಇದರಲ್ಲಿ ಜಾತಿ ಕುಲಗಳ ಪ್ರಶ್ನೆಯಿಲ್ಲ. ಇಂಥ ಅಪಾಯಕ್ಕೆ ಒಳಗಾದವರಿಗೆ ಇಲಾಖೆಯವರು ಕೂಡಲೇ ಸಹಾಯ ಒದಗಿಸುವಂತೆ ಒಂದು ವ್ಯವಸ್ಥೆ ಮಾಡಬೇಕು.

ಇನ್ನು ಈ ಅಕೌಂಟ್ಸ್ ವಿಚಾರದಲ್ಲಿ ಶ್ರೀ ಬಂಗಾರಪ್ಪನವರು ಹೇಳಿದ್ದನ್ನೇ ನಾನು ಒಪ್ಪತಕ್ಕವನಾಗಿದ್ದೇನೆ. ಇಲ್ಲದಿದ್ದರೆ ನಾನು ಪುನರಾವರ್ತನೆ ಮಾಡಬೇಕಾಗುತ್ತದೆ. ಆ ದ್ವಿರುಕ್ತಿ ಬೇಡ. ಇಲ್ಲಿ ಈ ಇಲಾಖೆಯವರು ನಮಗೆ ಒದಗಿಸಿರತಕ್ಕ ಲೆಕ್ಕಪತ್ರಗಳೇನಿವೆ ಇವು ಸಾಮಾನ್ಯ ಮನುಷ್ಯನಿಗೆ ಅರ್ಥವಾಗುವಂತಿಲ್ಲ. ಇದಕ್ಕೆ ಮತ್ತೆ ಒಬ್ಬರು ಆ ವೇದಪುರಾಣೋಪನಿಷತ್ತುಗಳಿಗೆ ಅರ್ಥವನ್ನು ಹೇಳುವಂತೆ ಹೇಳಬೇಕಾಗಿದೆ. ಇನ್ನು ಮುಂದಕ್ಕಾದರೂ ಇದನ್ನು ಸುಲಭರೂಪಕ್ಕೆ ಇಳಿಸಬೇಕೆಂದು ಅವರಿಗೆ ತಿಳುವಳಿಕೆ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಈ ವಿದ್ಯುಚ್ಛಕ್ತಿ ಇಲಾಖೆಯವರು ಚುನಾವಣೆಗಳ ಕಾಲದಲ್ಲಿ ಅಲ್ಲಲ್ಲಿ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕ ಬಗ್ಗೆ ಬಂದವರು ಅಲ್ಲಿ ಒಂದು ಕಂಬವನ್ನು ಹಾಕುವುದೋ ಅಥವಾ ಅಲ್ಲಿ ಗುಂಡಿಯನ್ನು ಹೊಡೆಯುವುದೋ ಅಥವಾ ಅಲ್ಲಿ ಒಂದಷ್ಟು ತಂತಿಯನ್ನೋ ಹಾಕಿ ಹೊರಟು ಹೋದರೆ ಮತ್ತೆ ಅವರು ವಾಪಸ್ಸು ಬರುವುದೇ ಇಲ್ಲ. ಇಂಥ ವಿಚಿತ್ರ ರೀತಿಯಲ್ಲಿ ಈ ಕೆಲಸವನ್ನು ಮಾಡುತ್ತಿದ್ದಾರೆ. ಆ ಕೆಲಸವನ್ನಂತೂ ಅವರು ಪೂರೈಸುವುದೇ ಇಲ್ಲ ಈ ಕೆಲಸವನ್ನು ಇಲಾಖೆಯವರು ಕೇವಲ ಒಂದು ರೆವಿನ್ಯೂ ಸೈಡಿನಿಂದ ಮತ್ತು ಡೆವಲಪ್‌ಮೆಂಟಿನ ಸೈಡಿನಿಂದ ನೋಡುತ್ತಿದ್ದಾರೆ. ಕೆಲವು ಪಂಚಾಯಿತಿಗಳಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಿದಾಗ ಅಲ್ಲಿ ಬಡಬಗ್ಗರ ಹರಿಜನರ ಕೇರಿಗಳಿದ್ದರೆ ಅಂಥ ಕಡೆಗೆ ಕಂಬಗಳನ್ನೇ ಹಾಕುತ್ತಿಲ್ಲ. ಅವರಿಗೆ ಲೈಟನ್ನು ಒದಗಿಸುತ್ತಿಲ್ಲ. ನಾಳೆ 15ನೇ ಆಗಸ್ಟಿನ ದಿನ ಇಂಥ ಬಡಜನರ ಕೇರಿಗೂ ದೀಪಗಳನ್ನು ಹಾಕತಕ್ಕ ಒಂದು ಸ್ಕೀಮನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ ಎಂದು ಹೇಳುತ್ತಿದ್ದಾರೆ. ನೋಡಬೇಕು. ಆದರೆ ನಮ್ಮ ನೆಲಮಂಗಲ ತಾಲ್ಲೂಕಿನಲ್ಲಿ ಹೊನ್ನಸಂದ್ರದ ಮಜರೆ ಗಾಂಧಿಸೇವಾಗ್ರಾಮ ಎಂಬ ಒಂದು ಹಳ್ಳಿ ಇದೆ. ಅಲ್ಲಿಗೆ ದೀಪವನ್ನು ಹಾಕತ್ತೇವೆಂದು ಕಂಬವನ್ನು ನಟ್ಟು ಒಂದು ವರ್ಷದ ಮೇಲಾಯಿತು. ಆದರೆ ಇಂದಿಗೂ ಅಲ್ಲಿ ದೀಪವನ್ನು ಹಾಕಿಲ್ಲ. ಅಂದರೆ ಯಾವಾಗಲೂ ಇಂಥ ಅನಾನುಕೂಲಗಳೂ ಮತ್ತು ತೊಂದರೆಗಳೂ ಬರತಕ್ಕದ್ದೆಲ್ಲಾ ಬಡವರಿಗೇನೇ. ಈ ವಿಚಾರಕ್ಕೆ ಸರ್ಕಾರ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಈ ದಿವಸ ಎಲೆಕ್ಟ್ರಿಸಿಟಿ ಮತ್ತು ಪಿ.ಡಬ್ಲ್ಯು.ಡಿ. ಇವೆರಡು ಬಾಬುಗಳಿಗೆ ಶ್ರೀ ಚನ್ನಬಸಪ್ಪನವರು ಮಂತ್ರಿಗಳು. ಈ ಇಲಾಖೆಗಳು ಇವರ ಕೈಗೆ ಸಿಕ್ಕಿರತಕದ್ದು ಬಹಳ ಒಳ್ಳೆಯದು ಎಂದು ಕೆಲವರು ಹೇಳುತ್ತಿದ್ದಾರೆ ತಾವು ಚಿಕ್ಕಪುಟ್ಟವರ ತೊಂದರೆಯನ್ನು ನಿವಾರಣೆ ಮಾಡಬೇಕು.. ಹಿಂದೆ ಇದ್ದ ಹಾಗೆ ಮುಂದೆ ನಡೆಯುವುದಕ್ಕೆ ಅವಕಾಶವಿಲ್ಲ ಸ್ಟೋರಿನಲ್ಲಿ ಸರಿಯಾಗಿ ಪೀರಿಯಾಡಿಕಲ್ಲಾಗಿ ಆಡಿಟ್ಟಾಗುತ್ತಿಲ್ಲ ತಪ್ಪು ಮಾಡಿದವರಿಗೆ ಉಗ್ರ ಶಿಕ್ಷೆ ಆಗಬೇಕು. ಸರ್ಕಾರಕ್ಕೆ ಬರತಕ್ಕ ರೆವಿನ್ಯೂ ಹೆಚ್ಚಾಗಬೇಕು ಆದರೆ ಮಾನ್ಯ ಸಚಿವರಾದ ಚನ್ನಬಸಪ್ಪನವರ ವಿಚಾರದಲ್ಲಿ ಇವರು ಬೇಕಿ ರಾವಣೇಶ್ವರ ಇಲ್ಲವೇ ಎರಡನೇ ಯಮ ಅಥವಾ ರುದ್ರನೆಂದು ಸಾರ್ವಜನಿಕರು ಒಂದು ಭೀತಿಗೊಳಪಟ್ಟಿದ್ದಾರೆ. ನಿಜ. ತಪ್ಪುಮಾಡಿದವರಿಗೆ ತಾವು ಹಾಗಿರಲೇಬೇಕು. ಇಲ್ಲವಾದರೆ ಆಡಳಿತದಲ್ಲಿ ಸಡಿಲವಾಗುತ್ತದೆ. ಆದರೆ ಜನರು ಅಷ್ಟು ತಮ್ಮ ಬಗ್ಗೆ ಒಂದು ಭಯವನ್ನು ವ್ಯಕ್ತಪಡಿಸುತ್ತಿದ್ದರೂ ತಾವು ಹಾಗೆ ನಡೆಯುತಕ್ಕವರಲ್ಲ—ತಮಗೂ ಮಕ್ಕಳು ಮರಿಗಳಿದ್ದಾರೆ. ಆದರೆ ತಮ್ಮಲ್ಲಿ ನನ್ನ ಒಂದು ವಿನಂತಿ ಎಂದರೆ ಯಾರನ್ನು ತಾವು ಸಸ್ಪೆಂಡ್ ಮಾಡಲಾಗುತ್ತದೋ ಅಂಥವರ ಬಗ್ಗೆ ನಡೆಯಬೇಕಾದ ವಿಚಾರಣೆ ಏನಿದೆ ಅದನ್ನು ಬೇಗ ನಡೆಸಬೇಕೆಂದು ನಾನು ಹೇಳುತ್ತೇನೆ.

ಯಾರಾದರೂ ತಪ್ಪು ಮಾಡುವವರು ಕೈಗೆ ಸಿಕ್ಕಿದರೆ ಮಂತ್ರಿಗಳು ಸಸ್ಪೆಂಡ್ ಮಾಡುವರು, ಜಾಗ್ರತೆ ಕೇಸನ್ನು ತೀರ್ಮಾನ ಮಾಡುವುದಿಲ್ಲ, ಇದರೆಯಾಗುವುದು ಎಂದು ಹೇಳುತ್ತಾರೆ. ಅದುದರಿಂದ ತಪ್ಪಿತಸ್ತರ ಮೇಲೆ ಕ್ರಮ ತೆಗೆದುಕೊಳ್ಳಲು ಒಂದು ಕಾಲ ಮಿತಿಯಿರಬೇಕು. ಇದನ್ನು ಸಿಸ್ಟಮ್ಯಾಟಿಕ್ಕಾಗಿ ಮಾಡಿದರೆ ಒಳ್ಳೆಯದು, ಎಲ್ಲಾ ಇಲಾಖೆಗಳಿಗೆ ಸಂಬಂಧಪಟ್ಟಂತೆಯೂ ಹೀಗೆ ಮಾಡಬೇಕು. ಇದು ಮುಖ್ಯವಾದುದು. ಈಗ ೩೭ ಕೋಟಿ ರೂಪಾಯಿ ವರಮಾನವಿದೆ, ೩೧ ಕೋಟಿ ಖರ್ಚಿದೆ. ೫-೬ ಕೋಟಿ ಲಾಭವಿದೆ. ಲೀಕೇಜ್ ತಪ್ಪಿಸಿದರೆ ಹೊಸದಾಗಿ ತೆರಿಗೆ ಹಾಕುವುದು ತಪ್ಪಿ ಬೋರ್ಡಿಗೆ ಲಾಭವೂ ಬರುವುದು.

ಎಲೆಕ್ಟ್ರಿಸಿಟಿ ಸರ್ವಿಸ್ ಬಗ್ಗೆ ದೇಶದಲ್ಲಿ ಒಂದು ಆಸೆ ಇದೆ. ಪಂಪು ಸೆಟ್ಟುಗಳ ಕೊಟ್ಟಿರುವುದು. ಸಾಲದು. ಗ್ರಾಮಾಂತರಗಳಿಗೆ ವಿದ್ಯುತ್ ಸರಬರಾಜು ಮಾಡಿರುವುದು ಸಾಲದು ಎಂಬ ಅಭಿಪ್ರಾಯವಿದೆ ರೂರಲ್ ಎಲೆಕ್ಟ್ರಿಫಿಕೇಷನ್ನಿಗೆ ಅರ್ಧ ಹಣ ಒದಗಿಸಲಾಗಿದೆ. ಇಷ್ಟು ವರ್ಷದಲ್ಲಿ ಈ ಕೆಲಸ ಮಾಡುತ್ತೇವೆ ಎಂದು ಬಜೆಟ್ಟಿನಲ್ಲಿ ತಿಳಿಸಿದ್ದಾರೆ. ಆದರೆ ವಿದ್ಯುಚ್ಛಕ್ತಿ ಬೋರ್ಡಿನವರು ಸಹಕರಿಸುವರೆಂಬ ನಂಬಿಕೆ ಇಲ್ಲ. ನಾನು ವೈಯುಕ್ತಿಕವಾಗಿ ತಪ್ಪು ಕಂಡುಹಿಡಿಯುವುದಿಲ್ಲ. ಇದು ಹೈಲಿ ಟೆಕ್ನಿಕಲ್ ಇಲಾಖೆ, ಇದರ ಬಗ್ಗೆ ಸರ್ಕಾರದ ಜವಾಬ್ದಾರಿ ಬಹಳವಾಗಿದೆ. ಬೋರ್ಡ್ ದಕ್ಷತೆಯಿಂದ ಕೆಲಸ ಮಾಡಬೇಕು. ಹಣ ಇಷ್ಟು ಬೇಕೆಂದು ಕೇಳುವಾಗ ಸರಕಾರ ಕೊಡಬೇಕಾದಾಗ ಬೋರ್ಡಿನವರು ಜವಾಬ್ದಾರಿಯಿಂದ ಕೆಲಸ ಮಾಡಬೇಕು. ಬಜೆಟ್ಟಿನಲ್ಲಿ ನಮೂದಿಸಿರುವಂತೆ ಕೆಲಸ ನಡೆದರೆ ಬೋರ್ಡ್ ದಕ್ಷತೆಯಿಂದ ಕೆಲಸ ಮಾಡಿದೆ ಎಂದು ಭಾವಿಸಬಹುದು. ಈಗಾಗಲೆ ರಿವೈಜ್ಡ್ ಬಜೆಟ್ ಕೊಟ್ಟಿದ್ದಾರೆ. ಬೇಕಾದ ಮೆಟೀರಿಯಲ್ಸ್ ಕಲೆಕ್ಟ್ ಮಾಡಲು ಸಕಾಲದಲ್ಲಿ ಅವನ್ನು ತರಸಿಕೊಳ್ಳಲು ಪ್ರಯತ್ನ ಮಾಡಲಾಗಿದೆ. ವಿಜಿಲೆನ್ಸ್ ಸ್ಕ್ವಾಡ್ ಇಟ್ಟು ಪ್ರೋಗ್ರೆಸ್ ಸರಿಯಾಗಿರುವಂತೆ, ಸರಕಾರದ ನೀತಿಗೆ ಧಕ್ಕೆ ಬಾರದಂತೆ ನೋಡಿಕೊಳ್ಳಬೇಕು.

ಇಲಾಖೆಯಲ್ಲಿ ಖರ್ಚೆಷ್ಟು, ಸಂಬಳಕ್ಕೆ ಎಷ್ಟು ಖರ್ಚಾಗುತ್ತದೆ ಎಂಬುದನ್ನು ನೋಡಿದರೆ ೭ ಕೋಟಿ ರೂಪಾಯಿನಲ್ಲಿ ಮೂರುವರೆ ಕೋಟಿ ಸಂಬಳಕ್ಕೆ ಖರ್ಚಾಗುವುದು. ಮೂರೂವರೆ ಕೋಟಿ ಅಲೋಯನ್ಸ್ ವೈಗೆರೆಗೆ ಖರ್ಚಾಗುವುದು. ಟಿ ಎ ಮತ್ತು ಡಿ ಎ ಬೇರೆ ಇದೆ. ಬರೀ ಆಫೀಸರುಗಳ ಟಿ ಎ ಗೆ ಅಥವಾ ರೂಮುಗಳನ್ನು ಶೃಂಗಾರ ಮಾಡಲು ಹಣ ಒದಗಿಸಿದಂತೆ ಕಾಣುವುದು, ಇದು ಜಾಸ್ತಿಯೆಂಬ ಭಾವನೆ ಇದೆ. ಸಿಬ್ಬಂದಿಗೆ ಖರ್ಚಾಗುವುದು ಇದು ಎಂಬ ಅರ್ಥಮಾಡಿಕೊಂಡೆ. ಪರ್ ಕ್ಯಾಪಿಟ ಖರ್ಚು ನಮ್ಮ ಸಂಸ್ಥಾನದಲ್ಲಿ ಸ್ವಲ್ಪ ಕಡಿಮೆ ಇದೆ ಬೇರೆಯವರು ಹೆಚ್ಚು ಖರ್ಚು ಮಾಡುತ್ತಿದ್ದಾರೆ ನಾವೂ ಹೆಚ್ಚಿಸೋಣ ಎಂದಿರಬಹುದು. ನಮ್ಮ ದೇಶಕ್ಕೆ ಒಳ್ಳೆಯ ಆಡಳಿತ ದೊರೆಯಬೇಕಾದರೆ ಸಂಬಳಕ್ಕೆ ಖರ್ಚು ಮಾಡುವುದನ್ನು ಕಡಿಮೆ ಮಾಡಬೇಕು ಹಾಗೆಂದ ಮಾತ್ರಕ್ಕೆ ಅತಿಯಾಗಿ ಕಡಿಮೆ ಮಾಡಬೇಕೆಂದಲ್ಲ, ಲೀಕೇಜ್ ಕಡಿಮೆ ಮಾಡಿ ಚಿಕ್ಕ ಪುಟ್ಟ ನೌಕರರಿಗೆ ಹೆಚ್ಚು ಮಾಡಿ ಹೆಚ್ಚಿಗೆ ಇರುವವರಿಗೆ ಕಡಿಮೆ ಮಾಡಬೇಕು ಎಂಬುದು ನನ್ನ ಅಭಿಪ್ರಾಯ. ಬಜೆಟ್ಟಿನಲ್ಲಿ ಸರಕಾರ ಕೊಟ್ಟಿರುವ ಭರವಸೆಯನ್ನು ಪೂರೈಸಬೇಕಾಗಿದೆ ಬೋರ್ಡಿನವರಿಗೆ ಸರಕಾರ ತಮ್ಮ ಆಶ್ವಾಸನೆ ಬಗ್ಗೆ ತಿಳಿಸಿರುವರೇ ಎಂಬ ಅನುಮಾನವಿದೆ. ವಿದ್ಯುಚ್ಛಕ್ತಿ ಬೋರ್ಡ್ ಪಂಪು ಸೆಟ್ಟು ವಗೈರೆ ಕೊಡುವುದು, ಮಾಡುವ ಕೆಲಸ ನೋಡಿದರೆ ಮೆಟೀರಿಯಲ್ಸ್ ಎಸ್ಟಿಮೇಟ್ ಸರಿಯಾಗಿ ಮಾಡಿಲ್ಲವೆಂಬ ಶಂಕೆ ಬರುವುದು ಸರಕಾರ ತಾನು ಬಜೆಟ್ಟಿನಲ್ಲಿ ತಿಳಿಸಿರುವಂತೆ ಕೆಲಸ ಪೂರ್ಣ ಮಾಡದೇ ಬೋರ್ಡಿಗೆ ಸರಿಯಾಗಿ ತಿಳಿಸಬೇಕು ಮತ್ತು ಸರಕಾರ ಮತ್ತು ಬೋರ್ಡು ಸಹಕರಿಸಿ ಕಾರ್ಯ ಮಾಡಬೇಕು ಹೀಗೆ ಮಾಡುವರು ಎಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ. ''ಜೈ ಹಿಂದ್.''

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರ) .— ಸನ್ಮಾನ್ಯ ಸಭಾಧ್ಯಕ್ಷರೇ, ವಿದ್ಯುಚ್ಛಕ್ತಿ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈ ದಿನ ಮಾನ್ಯ ಸಚಿವರು ಏನೊಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ ಅವನ್ನು ನಾನು ನೋಡಿದ್ದೇನೆ. ಆದರೆ ಅದು ಅಧಿಕಾರಿಗಳು ಬರೆದುಕೊಟ್ಟ ಒಂದು ಹೇಳಿಕೆ ರೂಪದಲ್ಲಿದೆಯೇ ಹೊರತು ಅದರಲ್ಲಿ ಹೊಸದೇನೂ ಕಂಡುಬರುತ್ತಿಲ್ಲ. ಹಿಂದೆ ಕೂಡ ಈ ಇಲಾಖೆ ಬಗ್ಗೆ ಚರ್ಚೆ ಮಾಡಿದ್ದೇವೆ. ಆಗ ಇದೇ ರೀತಿ ಉತ್ತರ ಕೊಟ್ಟರೇ ಹೊರತು ಹೊಸ ಪರಿಹಾರ ಹುಡುಕಿರುವುದು ಕಂಡು ಬರುವುದಿಲ್ಲ; ಈ ಹೇಳಿಕೆಯಲ್ಲಿ ಹೊಸದೇನು ಇಲ್ಲ. ಪುಟ ಏಳರಲ್ಲಿರುವುದನ್ನು ನೋಡಿದರೆ ವರಮಾನ ಕಡಿಮೆಯಾಗಿದೆಯೆಂಬುದನ್ನು ಒಪ್ಪಿದ್ದಾರೆ. ಆಂಟಿಸಿಪೇಟೆಡ್ ರೆವಿನ್ಯೂ ಎಷ್ಟು ಎಂಬುದನ್ನು ಮುಖ್ಯವಾಗಿ ನೋಡಬೇಕು. ಹಿಂದೆ ೩೪.೯೮ ಕೋಟಿ ರೂಪಾಯಿ ಇದ್ದುದು ೭೨-೭೩ರಲ್ಲಿ ೩೩.೬೯ ಕೋಟಿಗೆ ಇಳಿದಿದೆ. ಶರಾವತಿ ಕೇರ್ಮಕಾಂಡಕ್ಕೂ ಇದಕ್ಕೂ ಸಂಬಂಧವಿದೆಯೇ ಎಂಬ ಅನುಮಾನ ಬರುವುದು. ಪತ್ರಿಕೆಯಲ್ಲಿ ಬಂದಿದ್ದ ಶರಾವತಿ ವ್ಯವಹಾರದ ವಿಚಾರ ಮತ್ತು ಈಗ ಕೊಟ್ಟಿರುವ ಅಂಕಿಅಂಶ ನೋಡಿದರೆ ಈಗ ವಿದ್ಯುಚ್ಛಕ್ತಿ ಉತ್ಪತ್ತಿ ಕಡಿಮೆಯಾಗಿ ರೆವಿನ್ಯೂ ಕಡಿಮೆಯಾಗಲು ಕಾರಣವಾಗಿದೆ ಎಂಬುದು ಸ್ಪಷ್ಟವಾಗುವುದು ಇದಕ್ಕೆ ಹೊಣೆ ಯಾರು ಇದೇಕೆ ಹೀಗಾಯ್ತು ಎಂಬ ವಿಚಾರದಲ್ಲಿ ನಾನು ಈಗ ಚರ್ಚೆ ಮಾಡುವುದಿಲ್ಲ. ಇದರ ಬಗ್ಗೆ ಚರ್ಚೆಯಾಗಬಹುದು. ಇದರ ಬಗ್ಗೆ ಮಂತ್ರಿಗಳಿಗೂ ಜವಾಬ್ದಾರಿ ಇದೆ. ಶರಾವತಿ ಬಗ್ಗೆ ಮಂತ್ರಿಗಳ ಜವಾಬ್ದಾರಿ ಇದ್ದೇ ಇದೆ. ಅವರು ಹಿಂದೆ ಮಂತ್ರಿಗಳಾಗಿದ್ದರು.

(MADAM SPEAKER *in the Chair*) :—

ಆದರೆ ತಮ್ಮದು ಇದರಲ್ಲಿ ಪಾತ್ರ ಇದೆ ಎನ್ನುವುದನ್ನು ಮರೆಯುವ ಹಾಗೇ ಇಲ್ಲ. ಅದನ್ನು ತಾವು ಸ್ವಲ್ಪ ಮಟ್ಟಿಗಾದರೂ ಒಪ್ಪಿಕೊಳ್ಳುತ್ತೀರಿ. ಹೋದ ವರ್ಷ ಇದರ ವರಮಾನ ೩೪.೯೭ ಕೋಟಿ ರೂಪಾಯಿ ಇದ್ದುದ್ದು ಈ ವರ್ಷ ೩೩.೬೯ ಕೋಟಿ ರೂಪಾಯಿ ಇದೆ. ಸುಮಾರು ಒಂದು ಕೋಟಿ ಚಿಲ್ಲರೆ ರೂಪಾಯಿ ಕಡಿಮೆಯಾಗಿದೆ. ಇದಕ್ಕೆ ಕಾರಣ ಏನು ಅನ್ನುವುದನ್ನು ಯೋಚನೆ ಮಾಡಬೇಕು. ಇದರಲ್ಲಿ ಇನ್ನೊಂದು ಮುಖ್ಯವಾದ ವಿಷಯ ಏನೆಂದರೆ ಇವೊತ್ತಿನ ದಿವಸ ಎಂ. ಎಸ್. ಇ. ಬಿ. ನಲ್ಲಿ ಖರ್ಚು ಜಾಸ್ತಿಯಾಗಿ ಲಾಭ ಕಡಿಮೆಯಾಗುವ ಪರಿಸ್ಥಿತಿ ಬಂದಿದೆ. ಅದಕ್ಕೆ ನಾನು ಹೇಳುವುದು ಏನೆಂದರೆ ಆದಷ್ಟು ಮಟ್ಟಿಗೆ ಇದರಲ್ಲಿ ಖರ್ಚು ಕಡಿಮೆ ಮಾಡಿ, ಲಾಭ ಬರುವ ಹಾಗೆ ಮಾಡಿ ಅಥವಾ ನೋ ಪ್ರಾಫಿಟ್ ನೋ ಲಾಸ್ ಬೇಸಿಸ್ ಮೇಲೆ ನಡೆಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡಿ. ಈಗ ತಾವು ಕೊಟ್ಟಿರ ತಕ್ಕಂತ ಸ್ಟೇಟ್‌ಮೆಂಟನ್ನು ನೋಡಿದರೆ ನೋ ಪ್ರಾಫಿಟ್ ನೋ ಲಾಸ ಬೇಸಿಸ್ ಮೇಲೆ ನಡೆಸಿಕೊಂಡು ಹೋಗಬೇಕು ಎನ್ನುವುದಕ್ಕೆ ಯಾವ ಸೂಚನೆಯೂ ಇದ್ದ ಹಾಗೆ ಕಾಣಲಿಲ್ಲ ಈಗ ಆಗಿರುವ ನಷ್ಟವನ್ನು ನೋಡಿದರೆ ಇದರಲ್ಲಿ ಖರ್ಚು ಜಾಸ್ತಿ ಆಗಿದೆಯೇ ಹೊರತು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲ. ಉದಾಹರಣೆ ಹೇಳುವುದಾದರೆ ಮೊದಲನೆಯದಾಗಿ ತಮಗೆ ಗೊತ್ತಿರುವ ಹಾಗೆ ಎಂ. ಎಸ್. ಇ. ಬಿ. ಬೋರ್ಡ್ ಅಲ್ಲದೆ ಪವರ್ ಕಾರ್ಪೊರೇಷನ್ ಅಂತ ಬೇರೆ ಮಾಡಿದ್ದೀರಿ. ಈ ಕಾರ್ಪೊರೇಷನ್‌ನ್ನು ಏತಕ್ಕೆ ಪ್ರಾರಂಭಮಾಡಬೇಕಾಗಿತ್ತು? ಇದರಿಂದ ಖರ್ಚು ಜಾಸ್ತಿ ಆಗುತ್ತಿದೆಯೇ ಹೊರತು ಕಡಿಮೆ ಏನೂ ಆಗುವುದಿಲ್ಲ. ೧೯೭೦ನೇ ಇಸವಿ ಏಪ್ರಿಲ್‌ನಲ್ಲಿ ಮೈಸೂರು ಪವರ್ ಕಾರ್ಪೊರೇಷನ್ ಅಂತ ಪ್ರಾರಂಭ ಮಾಡಿದರು ಕಾಳೀನದಿ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೋಸ್ಕರ ಈ ಪವರ್ ಕಾರ್ಪೊರೇಷನ್‌ನ್ನು ಪ್ರಾರಂಭ ಮಾಡಿದರು. ಈ ಎಂ ಪಿ ಸಿ. ನಿಂದ ಈಗ ಏನಾಗಿದೆ ಎಂದರೆ It is acting like a middleman ದಲ್ಲಾಳಿ ತರಹ ನಡೆಯುಕೊಳ್ಳುತ್ತಾ ಇದೆ. ಈಗ ಸರ್ಕಾರದ ಪರವಾಗಿ ಎಂ. ಎಸ್. ಇ. ಬಿ. ಬೋರ್ಡ್ ಇದೆ. ಇದರ ಮಧ್ಯೆ ಮೈಸೂರು ಪವರ್ ಕಾರ್ಪೊರೇಷನ್ ಏತಕ್ಕೆ ಬೇಕು! ಇದು ಒಂದು ಪಾಲಿಸಿ ಪ್ರಶ್ನೆ. ಈ ಎಂ. ಪಿ ಸಿ. ಯಲ್ಲಿ ಕೆಲಸ ಮಾಡುತ್ತಾ ಇರುವವರು ಎಂ. ಎಸ್ ಇ ಬಿ. ಬೋರ್ಡ್‌ನಿಂದ ಹೋಗಿರುವ ಅಧಿಕಾರಿಗಳೇ ಇದರಿಂದ ಎಲೆಕ್ಟ್ರಿಸಿಟಿ ಬೋರ್ಡಿಗೆ ಖರ್ಚು ಜಾಸ್ತಿಆಗುತ್ತದೆಯೇ ಹೊರತು ಕಡಿಮೆ ಆಗುವುದಿಲ್ಲ. ಎಲೆಕ್ಟ್ರಿಸಿಟಿ ದರವೂ ಕಡಿಮೆಯಾಗಿಲ್ಲ. ಎಲೆಕ್ಟ್ರಿಸಿಟಿ ರೇಟನ್ನುಕಡಿಮೆ ಮಾಡಬೇಕೆಂದು ಹೇಳುತ್ತಿದ್ದೇವೆ. ಆದರೆ ಇದರಲ್ಲಿ ಏನಾಗಿದೆ ಎಂದರೆ ಮೈಸೂರು ಕಾರ್ಪೊರೇಷನ್ನಿನವರಿಂದ ಎಂ. ಎಸ್. ಇ ಬಿ. ಯವರು ಅಟ್ ದಿ ಜನರೇಟಿಂಗ್ ಲೆವಲ್‌ನಲ್ಲೇ ೩ ಪೈಸೆಯಿಂದ ೪ ಪೈಸೆಯವರಗೆ ಕೊಂಡುಕೊಳ್ಳುತ್ತಿದ್ದಾರೆ ಆದರೆ ಎಂ ಪಿ ಸಿ ಯವರ ಪ್ರೊಡಕ್ಷನ್ ಕಾಸ್ಟ್ ವಾಸ್ತವಾಂಶವಾಗಿ ೨ ಪೈಸೆಗಿಂತ ಕಡಿಮೆ ಆಗುತ್ತದೆ. ಆದುದರಿಂದ ಎಲೆಕ್ಟ್ರಿಸಿಟಿ ರೇಟು ಕಡಿಮೆ ಆಗಬೇಕು ಎಂದು ತಜ್ಞರ ಅಭಿಪ್ರಾಯ ಎಂ. ಎಸ್. ಇ. ಬಿ. ಯವರು ಪವರ್ ಕಾರ್ಪೊರೇಷನ್ನಿನಿಂದ ೩ ರಿಂದ ೪ ಪೈಸೆಗೆ ಕೊಂಡುಕೊಂಡು ಮತ್ತು ಅದನ್ನು ಪುನಃ ಕನ್ಸೂಮರ್ಸ್‌ಗೆ ಮಾರುವುದರಿಂದ ಇದು ಯಾರ ಮೇಲೆ ಹೊರ ಬೀಳುತ್ತದೆ ಎಂದರೆ ಜನಗಳ ಮೇಲೆ ಹೊರೆ ಬೀಳುತ್ತದೆಯೇ ವಿನಃ ಬೇರೆ ಯಾರ ಮೇಲೂ ಬೀಳುವುದಿಲ್ಲ. ಅಲ್ಲದೆ ಟ್ರಾನ್ಸ್‌ಮಿಷನ್‌ನಿಂದ ಆಗುವ ಲಾಸ್‌ನ್ನೂ ಕೂಡ ಎಂ. ಎಸ್. ಇ. ಬಿ. ಯವರೇ ವಹಿಸಿಕೊಳ್ಳಬೇಕು ಎಂಬ ಧೋರಣೆ ಇದೆ. ಇದನ್ನೂ

ಸೇರಿಸಿಕೊಂಡರೆ ಜನಗಳ ಮೇಲೆ ಇನ್ನೂ ದುಬಾರಿ ಖರ್ಚು ಬಿದ್ದಂತಾಗುತ್ತದೆ. ಡೊಮೆಸ್ಟಿಕ್ ಮತ್ತು ನಾನ್ ಡೊಮೆಸ್ಟಿಕ್‌ಗೆ ಕಡಿಮೆ ರೇಟಿನಲ್ಲಿ ವಿದ್ಯುಚ್ಛಕ್ತಿ ಕೊಡುತ್ತೇವೆ ಎಂದು ಹೇಳುತ್ತಿರುವುದೇನೋ ನಿಜ. ಆದರೆ ಇದನ್ನೆಲ್ಲಾ ನೋಡಿದರೆ ಖರ್ಚು ಜಾಸ್ತಿಯಾಗುತ್ತದೆಯೇ ವಿನಃ ಕಡಿಮೆಯಾಗುವುದಿಲ್ಲ. ಇದರಲ್ಲಿ ನಿಜಾಂಶ ಹೇಳುವುದಾದರೆ ಎಂ ಎಸ್. ಇ. ಬಿ. ನಲ್ಲಿರುವ ಇಂಜಿನಿಯರ್ಸ್ ಮತ್ತು ಅಲ್ಲಿಯ ನೌಕರರು ಡೆಪ್ಯೂಟೇಷನ್ ಮೇಲೆ ಹೋಗಿ ಅಲ್ಲಿ ಕೆಲಸ ಮಾಡಬೇಕು ಇದರಿಂದ ಎಂ. ಪಿ ಸಿ. ಯವರಿಗೆ ಹೆಸರು ಬರುತ್ತದೆಯೇ ವಿನಃ ಎಂ. ಎಸ್. ಇ. ಬಿ. ಯವರಿಗೆ ಹೆಸರು ಬರುವುದಿಲ್ಲ. ಇದಕ್ಕೆ ಕಾರಣ ಏನು? ಏತಕ್ಕೋಸ್ಕರ ಎಂ. ಎಸ್ ಇ. ಬಿ. ಯವರನ್ನು ಅಲ್ಲಿ ಅಪಾಯಿಂಟ್ ಮಾಡಿಕೊಳ್ಳುತ್ತಿದ್ದೀರಿ? ಇದರ ಬಗ್ಗೆ ನನಗೆ ತಿಳಿದಿರುವ ಮಟ್ಟಿಗೆ ಹೇಳುವದಾದರೆ ಎಂ. ಎಸ್. ಇ ಬಿ. ಯವರು ಎಂ. ಪಿ. ಸಿ. ಗೆ ತಿಂಗಳು ಒಂದಕ್ಕೆ ಒಂದು ಕೋಟಿ ರೂಪಾಯಿ ಕೊಟ್ಟು ಬಿಡುವುದು. ಅವರು ಎಂ ಎಸ್. ಇ. ಬಿ. ಯವರ ಮೇಂಟೇನೆನ್ಸ್‌ಗೆ ೫೦ ಸಾವಿರ ರೂಪಾಯಿ ಕೊಟ್ಟು ಬಿಡುವುದು ಈ ರೀತಿ ಮಾಡಿಕೊಂಡಿದ್ದಾರೆ. ಕೆಲಸವೆಲ್ಲಾ ಮಾಡುವುದು ಎಂ. ಎಸ್. ಇ ಬಿ. ಯವರು. ಸುಮ್ಮನೆ ಎಂ. ಪಿ. ಸಿ. ನವರು ದುಡ್ಡು ತೆಗೆದುಕೊಳ್ಳುತ್ತಿದ್ದಾರೆ. ಈ ಕೆಲಸ ಎಂ. ಎಸ್. ಇ. ಬಿ. ಯವರೇ ಮಾಡಿದ್ದರೆ ಎಲೆಕ್ಟ್ರಿಸಿಟಿ ರೇಟ ಕಡಿಮೆ ಆಗುತ್ತಿತ್ತು ಮತ್ತು ಕೆಲಸ ಸುಸೂತ್ರವಾಗಿ ನಡೆದುಕೊಂಡು ಹೋಗುತ್ತಿತ್ತು ಎಂದು ನನ್ನ ಅಭಿಪ್ರಾಯ.

ಮೈಸೂರು ಪವರ್ ಕಾರ್ಪೊರೇಷನ್ ಇರಕೂಡದು ಎಂದು ಹೇಳುವುದಕ್ಕೆ ಒಂದು ಕಾರಣ ಇದೆ. ಎಂ. ಎಸ್. ಇ ಬಿ. ಯವರ ಒಂದು ಧೋರಣೆ ಏನು ಇದೆ ಎಂದರೆ ಅವರು ಇಲ್ಲದೇ ಹೋದರೆ ಎಲೆಕ್ಟ್ರಿಸಿಟಿ ಬರುವುದಿಲ್ಲ ಎಂದು. ಅವರ ಲೇಬರ್ ಪಾಲಿಸಿ ಏನಾಗಿದೆ ಎಂದರೆ It is absolutely anti worker policy. ಅಲ್ಲಿ ಕೆಲಸ ಮಾಡುವ ಕ್ಯಾಷುಯಲ್ ಲೇಬರರ್ಸ್ ಡಿಪ್ಲೊಮಾ ಹೋಲ್ಡರ್ಸ್ ಎಲ್ಲರನ್ನೂ ಕೂಡ ಕ್ಯಾಷುಯಲ್ ಬೇಸಿಸ್ ಮೇಲೆ ತೆಗೆದುಕೊಂಡಿದ್ದಾರೆ. ಅವರಿಗೆ ಒಂದು ಸರಿಯಾದ ರೆಕ್ರೂಟ್‌ಮೆಂಟ್ ಪಾಲಿಸಿ ಇಲ್ಲ. ಅವರ ಒಂದು ಧೋರಣೆ ಸರಿಯಾಗಿಲ್ಲ. ಆದುದರಿಂದ ಈ ಎಂ. ಎಸ್. ಇ. ಬಿ. ನಲ್ಲಿ ಕೆಲಸ ಮಾಡುತ್ತಾ ಇರುವ ನೌಕರರನ್ನು ಅವರು ನೋಡಿಕೊಳ್ಳುವ ವಿಧಾನವೇ ಬೇರೆ ಒಂದು ತರಹ ರೆಗ್ಯೂಲರ್ ಮಾರ್ವಾಡಿಯಂತೆ ತಲೆ ಮೇಲೆ ಕೂತುಕೊಂಡು ಕೆಲಸ ಮಾಡಿಸುತ್ತಾರೆ. ಅದೇ ರೀತಿ ಎಂ ಪಿ. ಸಿ. ಯವರೂ ಕೂಡ ಅವರ ನೌಕರ ವರ್ಗದವರನ್ನು ನೋಡಿಕೊಳ್ಳುತ್ತಾರೆ. ಆದುದರಿಂದ ಈ ನೌಕರ ವರ್ಗದವರ ಮೂಲಭೂತವಾದ ಪ್ರಶ್ನೆ ಏನು ಇದೆ ಅದನ್ನು ಬಗೆಹರಿಸಬೇಕು ಎಂದು ಹೇಳುತ್ತೇನೆ. ಇದರಿಂದ ನಮಗೆ ಎಂ ಪಿ ಸಿ. ಬೇಕಾಗಿಲ್ಲ. ಅವರು ಡ್ಯೂಯಲ್ ಕಂಟ್ರೋಲ್ ಇದ್ದ ಹಾಗೆ ಎಂದು ಹೇಳುತ್ತೇನೆ. ಶ್ರೀ ಕೆ. ಹನುಮಂತಯ್ಯನವರು ಅಡ್ಮಿನಿಸ್ಟ್ರೇಟೀವ್ ರಿಫಾರಂಸ್ ಕಮಿಟಿ ಛೇರ್ಮನ್ ಆಗಿದ್ದಾಗ ಅವರು ಹೇಳಿದ್ದಾರೆ, "there cannot be two organisations for the same functions" ಎಂದು ಈ ರೀತಿ ಹೇಳಿದ್ದಾರೆ ಈ ಜನರೇಷನ್ ಮತ್ತು ಡಿಸ್ಟ್ರಿಬ್ಯೂಷನ್‌ಗೆ ಒಂದೇ ಆರ್ಗನೈಸೇಷನ್ ಇರಬೇಕು. ಜನರೇಷನ್‌ಗೆ ಒಂದು ಆರ್ಗನೈಸೇಷನ್, ಡಿಸ್ಟ್ರಿಬ್ಯೂಷನ್‌ಗೇ ಒಂದು ಆರ್ಗನೈಸೇಷನ್ ಈ ರೀತಿ ಎರಡು ಆರ್ಗನೈಸೇಷನ್ ಇರಬೇಕಾದ ಅವಶ್ಯಕತೆ ಇಲ್ಲ ಆದುದರಿಂದ ನಮ್ಮಲ್ಲಿ ಎಂ. ಎಸ್. ಇ. ಬಿ. ಇರುವುದರಿಂದ ಮೈಸೂರು ಪವರ್ ಕಾರ್ಪೊರೇಷನ್ ಇರುವುದು ಬೇಕಾಗಿಲ್ಲ ಯಾರಿಗೋ ಒಬ್ಬರಿಗೆ ಅನುಕೂಲ ಮಾಡಿಕೊಡುವುದಕ್ಕೋಸ್ಕರ, ಯಾರೋ ಒಬ್ಬರು ಇಂಜಿನಿಯರನ್ನು ಕರೆದುಕೊಂಡು ಬರುವುದಕ್ಕೆ ಈ ರೀತಿ ಡ್ಯೂಯಲ್ ಕಂಟ್ರೋಲ್ ಇಟ್ಟುಕೊಳ್ಳುವುದು ತಪ್ಪು. ಶ್ರೀ ಹಯಾತ್‌ರವರನ್ನು ಕರೆದುಕೊಂಡು ಒಂದು ಅಪಾಯಿಂಟ್‌ಮೆಂಟ್ ಕೊಡಬೇಕು ಎಂದು ತಜ್ಞರ ಅಭಿಪ್ರಾಯ ಇದ್ದರೆ ಅವರಿಗೆ ಒಂದು ಸಪರೇಟ್ ವಿಂಗ್ ಆಫ್ ದಿ ಡಿಪಾರ್ಟ್‌ಮೆಂಟ್ ಮಾಡಬಹುದಾಗಿತ್ತು. ಆದರೆ ಡ್ಯೂಯಲ್ ಕಂಟ್ರೋಲ್ ಇಡಬಾರದು. ಇದರಿಂದ ಎಂ. ಪಿ. ಸಿ ಸರಿಯಾಗಿ ನಡೆಯುತ್ತಾ ಇಲ್ಲವೆಂದು ಸ್ಪಷ್ಟವಾಗಿ ಹೇಳಬಹುದು.

ಇನ್ನೊಂದು ವಿಷಯವನ್ನು ಹೇಳುತ್ತೇನೆ. ಈವೊತ್ತಿನ ದಿವಸ ದೇಶದಲ್ಲಿರುವ ಟ್ರೆಂಡ್ ನೋಡಿದರೆ ಕಾಳೀ ನದಿಯ ಪೂರ್ತಾ ವೆಚ್ಚವನ್ನು ಕೇಂದ್ರದವರು ವಹಿಸಿಕೊಳ್ಳುತ್ತಾರೆಂದು ಹೇಳುತ್ತಿದ್ದೀರಿ. ಈ ರೀತಿಯಾಗಿ ಎಲೆಕ್ಟ್ರಿಫಿಕೇಷನ್ ಆಫ್ ಸ್ಕೀಮ್ಸ್, ರಿವರ್ ಸ್ಕೀಮ್ಸ್ ಮತ್ತು ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಇವುಗಳನ್ನು ಕೇಂದ್ರದವರು ತಮ್ಮ ಕೈಯಲ್ಲೇ ಇಟ್ಟುಕೊಳ್ಳಬೇಕೆಂದು ಇದ್ದಾರೆ ಏತಕ್ಕೆಂದರೆ ಈ ಕಚ್ಚಾಟ, ಅಂತರ್ಯುದ್ಧ ಏನು ಇದೆಯೋ ಅದನ್ನು ದೂರ ಮಾಡಬೇಕು ಎನ್ನುವ ಉದ್ದೇಶದಿಂದ ಈ ರೀತಿ ಮಾಡಬೇಕು ಎಂದು ಇದ್ದಾರೆ ಅವರು ಈ ರೀತಿ ಮಾಡಿಕೊಳ್ಳಬೇಕಾದರೆ ಈವಾಗ ಎಂ. ಎಸ್. ಇ ಬಿ. ಬೋರ್ಡ್ ಏನು ಇದೆ, ಇದರ ಜೊತೆಗೆ ಎಂ ಪಿ. ಸಿ. ಏನು ಮಾಡಿದ್ದೀರಿ. ಅದರಿಂದ ಪ್ರಯೋಜನವಿಲ್ಲ. It is not real decentralisation. You are really not giving any power to any body to act independently ನನಗೆ ಗೊತ್ತಿರುವುದು ಏನೆಂದರೆ Your policy goes agaiest the very principle of de Centrialisation. I think what the Centre thinks now is more progressive than the policy you are pressing here. ಈ ದೃಷ್ಟಿಯಿಂದ

(ಶ್ರೀ ಎಂ.ಎಸ್. ಕೃಷ್ಣನ್)

ಹೇಳುವುದಾದರೆ ಕಾಳೀನದಿ ಯೋಜನೆಯ ವೆಚ್ಚವನ್ನು ಕೇಂದ್ರದವರೇ ಒಪ್ಪಿಕೊಂಡಿದ್ದಾರೆಂದು ಶ್ರೀಮಾನ್ ದೇವರಾಜ್‌ಅರಸ್‌ರವರು ಮತ್ತು ಶ್ರೀಮಾನ್ ಹೆಚ್. ಎಂ. ಚೆನ್ನಬಸಪ್ಪನವರು ಹೇಳಿದ್ದಾರೆ ಆದುದರಿಂದ ಇದರ ಖರ್ಚನ್ನು ಕಡಿಮೆಮಾಡುವುದಕ್ಕೆ ತಾವು ಗಮನ ಕೊಡಬೇಕಾಗಿದೆ. ಈ ದೃಷ್ಟಿಯಿಂದ ಎ. ಪಿ ಸಿ. ಗೆ ಏನೂ ಕೆಲಸವಿಲ್ಲ. ಎಂ. ಎಸ್. ಇ. ಬಿ. ಅವರೇ ಒಂದು ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡುತ್ತಾ ಇದ್ದಾರೆ ಎನ್ನುವುದನ್ನು ತಾವು ಗಮನಿಸಬೇಕು.

ಇಂಡಿಯನ್ ಎಲೆಕ್ಟ್ರಿಸಿಟಿ ಆಕ್ಟ್ ೧೯೨೫, ಇವಕ್ಕೆ ವಿರುದ್ಧವಾಗಿ ಏನೇನು ಮಾಡಿದ್ದಾರೆ ಎನ್ನುವುದನ್ನು ಇಂದು ಪರಿಶೀಲಿಸಬೇಕಾಗಿದೆ. ಇಂಡಿಯನ್ ಎಲೆಕ್ಟ್ರಿಸಿಟಿ ಆಕ್ಟ್‌ನೊಳಗೆ ಸೆಕ್ಷನ್ ೧೮ ಮತ್ತು ೨೦ (ಎ) ತಾವು ನೋಡಬಹುದು. ಸೆಕ್ಷನ್ ೧೮ ರಲ್ಲಿ ಈ ರೀತಿಯಾಗಿ ಹೇಳಿದ್ದಾರೆ.—

5-00 P. M.

"18. Powers and Duties of State Electricity Board—Subject to the provisions of this Act, the Board shall be charged with the general duty of promoting the co-ordinated development of the generation, supply and distribution of eletricity within the State in the most efficient and economical manner"

ಜನರೇಷನ್, ಸಪ್ಲೈ ಅಂಡ್ ಡಿಸ್ಟ್ರಿಬ್ಯುಶ್ಯನ್ ವಿಥಿನ ದಿ ಸ್ಟೇಟ್ ಎಂದು ಹೇಳಿದ್ದಾರೆ. ಮಿಕ್ಕದನ್ನು ಅಲ್ಲಿ ಓದಬೇಕಾಗಿಲ್ಲ. ಇದು ಈ ಹೊತ್ತು ಡಿಪಾರ್ಟಮೆಂಟಿಗೆ ಇರುವ ಕೆಲಸಕಾರ್ಯಗಳು ಮುಂದೆ ಸೆಕ್ಷನ್ ೨೦ (ಎ) ನಲ್ಲಿ ಈ ರೀತಿಯಾಗಿ ಹೇಳಿದ್ದಾರೆ.—

"2 A. Without prejudice to the generality of the power of the Board to acquire any property, the Board may acquire from the State Government on lease any project relating to the generation of electricity and all transmission lines and other works connected with such project or any part of such project, transmission lines or other works on such terms and conditions, including terms and conditions relating to the operation and maintenance thereof as may be agreed upon between the State Government and the Board."

